ಕರ್ನಾಟಕ ಸರಕಾರ

# ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ (ಡಯಟ್), ಚಿತ್ರದುರ್ಗ

## ಚಿತ್ರದುರ್ಗ ಜಿಲ್ಲೆಯ ಸರ್ಕಾರಿ ಕಿರಿಯ/ಹಿರಿಯ ಪ್ರಾಥಮಿಕ ಶಾಲೆಗಳ ಶಿಕ್ಷಕರಿಗೆ "ದೀಕ್ಷಾ" ಪೋರ್ಟಲ್/ಆಪ್ ಬಳಕೆ ಮತ್ತು ಉಪಯೋಗದ ಪರಿಮಾಣಾತ್ಮಕ ಅಧ್ಯಯನ ವರದಿ

india.gov.in
national portal of india




::ಮಾರ್ಗದರ್ಶನ & ಸಲಹೆ ನೀಡಿದವರು::

ಶ್ರೀ ಎಸ್,ಕೆ,ಬಿ.ಪ್ರಸಾದ್

ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ

ಪ್ರಾಂಶುಪಾಲರು ಡಯಟ್, ಚಿತ್ರದುರ್ಗ

::ಅಧ್ಯಯನ ಕೈಗೊಂಡವರು::

ಶ್ರೀ ಜಿ.ಎಸ್.ನಾಗರಾಜ್

ಉಪನ್ಯಾಸಕರು

ಡಯಟ್, ಚಿತ್ರದುರ್ಗ

# ಮಾರ್ಗದರ್ಶಕರ ದೃಢೀಕರಣ ಪತ್ರ



2020–21ನೇ ಸಾಲಿನ ಶಿಕ್ಷಕ ಶಿಕ್ಷಣ ಯೋಜನೆ ಯಡಿಯಲ್ಲಿ "ಡಿ.ಎಸ್.ಇ.ಅರ್.ಟಿ." ವತಿಯಿಂದ ಅನುಮೋದನೆಯಾದ **"**ಚಿತ್ರದುರ್ಗ ಜಿಲ್ಲೆಯ ಸರ್ಕಾರಿ ಕಿರಿಯ/ಹಿರಿಯ ಪ್ರಾಥಮಿಕ ಶಾಲೆಗಳ ಶಿಕ್ಷಕರಿಗೆ "ದೀಕ್ಷಾ" ಪೋರ್ಟಲ್/ಆಪ್ ಬಳಕೆ ಮತ್ತು ಉಪಯೋಗದ ಪರಿಮಾಣಾತ್ಮಕ ಅಧ್ಯಯನ ವರದಿ**"** ವನ್ನು ಶ್ರೀ **ಜಿ.ಎಸ್.ನಾಗರಾಜ್** ಉಪನ್ಯಾಸಕರು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ, ಚಿತ್ರದುರ್ಗ ಇವರು ನನ್ನ ಮಾರ್ಗದರ್ಶನದಲ್ಲಿ ಅಧ್ಯಯನವನ್ನು ನಡೆಸಿರುತ್ತಾರೆಂದು ಈ ಮೂಲಕ ದೃಢೀಕರಿಸುತ್ತೇನೆ.

**ಶ್ರೀ ಎಸ್.ಕೆ.ಬಿ.ಪ್ರಸಾದ್**
ಉಪನಿರ್ದೇಶಕರು (ಅಭಿವೃದ್ಧಿ)
ಡಯಟ್. ಚಿತ್ರದುರ್ಗ.

# ಕೃತಜ್ಞತೆಗಳು



2020–21ನೇ ಸಾಲಿನ ಶಿಕ್ಷಕ ಶಿಕ್ಷಣ (ಟಿ.ಇ.ಪ್ಲಾನ್) ಯೋಜನೆಯಡಿಯಲ್ಲಿ "ಡಿ.ಎಸ್.ಇ.ಆರ್.ಟಿ. ಬೆಂಗಳೂರು" ವತಿಯಿಂದ ಅನುಮೋದನೆಯಾದ ಚಿತ್ರದುರ್ಗ ಜಿಲ್ಲೆಯ ಸರ್ಕಾರಿ ಕಿರಿಯ/ಹಿರಿಯ ಪ್ರಾಥಮಿಕ ಶಾಲೆಗಳ ಶಿಕ್ಷಕರಿಗೆ "ದೀಕ್ಷಾ" ಪೋರ್ಟಲ್/ಆಪ್ ಬಳಕೆ ಮತ್ತು ಉಪಯೋಗದ ಪರಿಮಾಣಾತ್ಮಕ ಅಧ್ಯಯನ ವರದಿಎಂಬ ಶೀರ್ಷಿಕೆಯಡಿ ವಿಶ್ಲೇಷಣಾತ್ಮಕ ಅಧ್ಯಯನವನ್ನು ಕೈಗೊಳ್ಳಲಾಗಿತ್ತು.

ಈ ಅಧ್ಯಯನ ಕೈಗೊಳ್ಳಲು ಅಗತ್ಯ ಸಲಹೆ/ಮಾರ್ಗದರ್ಶನ ಹಾಗೂ ಸಹಕಾರ ನೀಡಿದ ಶ್ರೀ ಎಸ್.ಕೆ.ಬಿ.ಪ್ರಸಾದ್ ಉಪನಿರ್ದೇಶಕರು, (ಅಭಿವೃದ್ಧಿ) ಹಾಗೂ ಪ್ರಾಂಶುಪಾಲರು ಡಯಟ್, ಚಿತ್ರದುರ್ಗ, ರವರಿಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

ಈ ಅಧ್ಯಯನವನ್ನು ಕೈಗೊಳ್ಳಲು ಅಗತ್ಯ ಸಲಹೆ/ಮಾರ್ಗದರ್ಶನ, ಹಾಗೂ ಸಹಕಾರ ನೀಡಿದ ಚಿತ್ರದುರ್ಗ ತಾಲ್ಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಕ್ಷೇತ್ರ ಸಮನ್ವಯಾಧಿಕಾರಿಗಳು ಹಾಗೂ ಇ.ಸಿ.ಓ.ಗಳು ಕ್ಷೇತ್ರ ಸಂಪನ್ಮೂಲ ವ್ಯಕ್ತಿಗಳು/ಕ್ಲಸ್ಟರ್ ಸಂಪನ್ಮೂಲ ವ್ಯಕ್ತಿಗಳು ಹಾಗೂ ಶಾಲಾ ಮುಖ್ಯ ಶಿಕ್ಷಕರು ಹಾಗು ಸಹಶಿಕ್ಷಕರುಗಳಿಗೆ ಈ ಮೂಲಕ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

ಸಲಹೆ ಹಾಗೂ ಸಹಕಾರ ನೀಡಿದ ಡಯಟ್‌ನ ಎಲ್ಲಾ ಉಪನ್ಯಾಸಕರುಗಳು ಹಾಗೂ ಸಿಬ್ಬಂದಿವರ್ಗದವರಿಗೆ, ಮತ್ತು ಈ ಅಧ್ಯಯನ ವರದಿಯನ್ನು ನಿಖರವಾಗಿ, ಕ್ರೋಢೀಕರಿಸಿ, ವಸ್ತುನಿಷ್ಠ ದತ್ತಾಂಶ ವಿಶ್ಲೇಷಣೆಯನ್ನು ತಯಾರಿಸಿಕೊಟ್ಟ ಚಿತ್ರದುರ್ಗ ತಾಲ್ಲೂಕಿನ ಸ.ಉ.ಹಿ.ಪ್ರಾ.ಶಾಲೆಯ ಶಿಕ್ಷಕರಾದ ಶ್ರೀ ಎಂ.ಎಲ್.ತಿಮ್ಮರಾಜ್ ಇವರಿಗೆ ಧನ್ಯವಾದಗಳನ್ನು ಅರ್ಪಿಸುತ್ತಿದ್ದೇನೆ.

ಜಿ.ಎಸ್.ನಾಗರಾಜ್
ಉಪನ್ಯಾಸಕರು,
ಡಯಟ್, ಚಿತ್ರದುರ್ಗ

ಪೀಠಿಕೆ :–

## ದೀಕ್ಷಾ– ಶಾಲಾ ಶಿಕ್ಷಣಕ್ಕಾಗಿ ರಾಷ್ಟ್ರೀಯ ಶಿಕ್ಷಕರ ವೇದಿಕೆ

DIKSHA ಎಂದರೆ ಜ್ಞಾನ ಹಂಚಿಕೆಗಾಗಿ ಡಿಜಿಟಲ್ ಮೂಲಸೌಕರ್ಯ. ಇದು ರಾಷ್ಟ್ರೀಯ ಶಿಕ್ಷಕರ ವೇದಿಕೆಯಾಗಿದ್ದು, ಪ್ರಸ್ತುತ ದೇಶಾದ್ಯಂತ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ದೂರ ಶಿಕ್ಷಣದ ಮೂಲಕ ಶಾಲಾ ಶಿಕ್ಷಣವನ್ನು ನೀಡಲು ಬಳಸುತ್ತಿದ್ದಾರೆ.

ಕೋವಿಡ್–19 ರಿಂದಾಗಿ ಶಾಲಾ ಶಿಕ್ಷಣದ ಅಡಚಣೆಯ ನಡುವೆ, ದೀಕ್ಷಾ, ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ವಿನೂತನ ರಾಜ್ಯ ಕಾರ್ಯಕ್ರಮಗಳ ಮೂಲಕ ಮನೆಯಲ್ಲಿ ಕಲಿಕೆ ಮತ್ತು ಶಿಕ್ಷಣವನ್ನು ಸಕ್ರಿಯಗೊಳಿಸಲು ಸಾಧ್ಯವಾಗಿಸುತ್ತದೆ. ಭಾರತಾದ್ಯಂತ ಶಿಕ್ಷಕರು ಮತ್ತು ಕಲಿಕಾರ್ಥಿಗಳ ಅನುಕೂಲಕ್ಕಾಗಿ ತಂತ್ರಜ್ಞಾನದ ಬಳಕೆಯನ್ನು ದೀಕ್ಷಾ ಮುಂದಿಡುತ್ತಿದೆ.

### ದೀಕ್ಷಾ ವೇದಿಕೆ

ಫೆಬ್ರವರಿ 2021 ರಲ್ಲಿ, ಭಾರತ ಸರ್ಕಾರದ ಎಜುಟೆಕ್ ಆಪ್ ಮೂಲಕ ದೀಕ್ಷಾದಲ್ಲಿ 10 ಮಿಲಿಯನ್ ಇನ್‌ಸ್ಟಾಲ್‌ಗಳನ್ನು ಮಾಡಿಕೊಂಡಿರುತ್ತಾರೆ. ದೀಕ್ಷಾ ಆಪ್ ಶೇಕಡಾ 100 ರಷ್ಟು ಉಚಿತ ಮತ್ತು ಕೇಂದ್ರ ಸರ್ಕಾರದ ಶಿಕ್ಷಣ ಸಚಿವಾಲಯದ ಮಾಲೀಕತ್ವ ಮತ್ತು ನಿರ್ವಹಣೆಯ ಜವಬ್ದಾರಿ ಹೊಂದಿಕೊಂಡಿರುತ್ತಾರೆ.

ಸಾಮಾನ್ಯ ಜಾಗೃತಿ ವಿಭಾಗದ ಅಡಿಯಲ್ಲಿ ವಿವಿಧ ಸರ್ಕಾರಿ ಪರೀಕ್ಷೆಗಳಿಗೆ ವಿಷಯವು ಮುಖ್ಯವಾಗಿದೆ. ಆದ್ದರಿಂದ ಅಭ್ಯರ್ಥಿಗಳು ದೀಕ್ಷಾ ವೇದಿಕೆ ಅಥವಾ ಉಪಕ್ರಮದ ಬಗ್ಗೆ ಸತ್ಯ ಮತ್ತು ವಿವರಗಳನ್ನು ತಿಳಿದುಕೊಳ್ಳ ಬೇಕಾಗಿರುತ್ತದೆ.

### ದೀಕ್ಷಾ ಆಪ್ ಕುರಿತು ಒಂದು ಅವಲೋಕನ:

ದೀಕ್ಷಾ ಆಪ್ ಶಾಲಾ ಶಿಕ್ಷಣಕ್ಕಾಗಿ ರಾಷ್ಟ್ರೀಯ ವೇದಿಕೆಯಾಗಿದ್ದು, ಸೆಪ್ಟೆಂಬರ್ 5, 2017 ರಂದು ಪ್ರಾರಂಭಿಸಲಾಗಿದೆ. ಇದು ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಮಂಡಳಿ (NCERT) ಮತ್ತು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯ– MHRD ಯಿಂದ ಡಿಜಿಟಲ್ ಕಲಿಕೆಯ ವಿಭಾಗಗಳಲ್ಲಿ ಒಂದು ಉಪಕ್ರಮವಾಗಿದೆ.

ರಾಷ್ಟ್ರೀಯ ಶಿಕ್ಷಕರ ವೇದಿಕೆಯ ಕಾರ್ಯತಂತ್ರ ಮತ್ತು ಅನುಸಂಧಾನ ಪತ್ರಿಕೆಯಲ್ಲಿ ವಿವರಿಸಿರುವಂತೆ ತೆರೆದ ವಾಸ್ತುಶಿಲ್ಪ, ಮುಕ್ತ ಪ್ರವೇಶ, ಮುಕ್ತ ಪರವಾನಗಿ ವೈವಿಧ್ಯತೆ, ಆಯ್ಕೆ ಮತ್ತು ಸ್ವಾಯತ್ತತೆಯ ಮೂಲತತ್ವಗಳ ಆಧಾರದ ಮೇಲೆ ಇದನ್ನು ಅಭಿವೃದ್ಧಿಪಡಿಸಲಾಗಿದೆ.

ರಾಷ್ಟ್ರೀಯ ಶಿಕ್ಷಕರ ವೇದಿಕೆಯನ್ನು ದೀಕ್ಷಾ ಎಂದು ಕರೆಯಲಾಗಿದೆ. ದೀಕ್ಷಾದ ಧ್ಯೇಯವಾಕ್ಯ– **"ನಮ್ಮ ಶಿಕ್ಷಕರು ನಮ್ಮ ನಾಯಕರು"**

ದೀಕ್ಷಾ –ರಾಷ್ಟ್ರೀಯ ಶಿಕ್ಷಕರ ವೇದಿಕೆಯನ್ನು ಓಪನ್ ಶೈಕ್ಷಣಿಕ ಸಂಪನ್ಮೂಲಗಳು (OER), ಮತ್ತು ಶಾಲೆಗಳಲ್ಲಿ ಶಿಕ್ಷಕರು, ಶಿಕ್ಷಕರ ಶಿಕ್ಷಣ ಸಂಸ್ಥೆಗಳಲ್ಲಿ (TET) ಶಿಕ್ಷಕ ಶಿಕ್ಷಕರು ಮತ್ತು (TET) ಗಳಲ್ಲಿ ವಿದ್ಯಾರ್ಥಿ ಶಿಕ್ಷಕರಿಗೆ ಉಪಕರಣಗಳನ್ನು ಆಯೋಜಿಸಲಾಗಿದೆ.

ಈ ಉಪಕ್ರಮದ ಉದ್ದೇಶ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ತಮ್ಮ ಅಧ್ಯಯನವನ್ನು ಎಂದಿನಂತೆ ಮುಂದುವರೆಸಲು ಮತ್ತು ಇಬ್ಬರಿಗೂ ಸಮಗ್ರ ಕಲಿಕೆಯನ್ನು ಖಚಿತಪಡಿಸುವುದು. ಎಸ್.ಟಿ.ಪಿ. ಎನ್ನುವುದು ಒಪನ್ ಸ್ಟಾಂಡರ್ಡ್ ಮತ್ತು ಅಪ್ಲಿಕೇಶನ್ ಪ್ರೋಗ್ರಾಂ ಇಂಟರ್‌ಫೇಸಗಳನ್ನು (ಎಪಿಐ) ಬಳಸಿ ನಿರ್ಮಿಸಲಾದ ಕನಿಷ್ಟ ಮತ್ತು ಸಾಮಾನ್ಯೀಕೃತ ತಂತ್ರಜ್ಞಾನ ವೇದಿಕೆಯಾಗಿದೆ ಮತ್ತು ಓಪನ್ ಎಜುಕೇಶನಲ್ ರಿಸೋರ್ಸ್ (ಓಇಆರ್) ಅನ್ನು ಆಯೋಜಿಸುತ್ತದೆ. ಇದು ಬೋಧನೆ ಮತ್ತು ಕಲಿಕೆಯ ವಿಷಯದ ಸೃಷ್ಟಿ ಮತ್ತು ಬಳಕೆಗಾಗಿ ಉಪಕರಣಗಳು ಮತ್ತು ಇಂಟರ್ ಫೇಸಗಳನ್ನು ಸಹ ಹೊಂದಿರುತ್ತದೆ. ಹಂಚಿಕೆಯ ಮೂಲಸೌಕರ್ಯವಾಗಿ ವೇದಿಕೆಯು ಬಲಪಡಿಸುತ್ತದೆ.

ದೀಕ್ಷಾವು ವರ್ತನೆ, ಕೌಶಲ್ಯ ಮತ್ತು ಜ್ಞಾನದ ಬೆಳವಣಿಗೆ ಸೇರಿದಂತೆ ಶಿಕ್ಷಕರ ಅಗತ್ಯಗಳನ್ನು ಪೂರೈಸುತ್ತದೆ. ಬಳಕೆದಾರರ ಅಗತ್ಯತೆಗಳು ಮತ್ತು ಮಧ್ಯಸ್ಥಗಾರರ ಪ್ರತಿಕ್ರಿಯೆಯ ಆಧಾರದ ಮೇಲೆ ವೇದಿಕೆಯನ್ನು ನಿರಂತರವಾಗಿ ಕ್ರಿಯಾಶೀಲತೆಯನ್ನು ಹೊಂದಿರುತ್ತದೆ.

ಎನ್‌ಟಿಪಿ ಪೂರ್ವ ಪ್ರಾಥಮಿಕ, ಪ್ರಾಥಮಿಕ, ಹಿರಿಯ ಪ್ರಾಥಮಿಕ, ಮಾಧ್ಯಮಿಕ ಮತ್ತು ಹಿರಿಯ ಮಾಧ್ಯಮಿಕ ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದ ಎಲ್ಲಾ ಅಗತ್ಯತೆಗಳನ್ನು ಪೂರೈಸುತ್ತದೆ. ಭಾರತದ ಎಲ್ಲಾ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಬಳಕೆಗಾಗಿ ದೀಕ್ಷಾ ಆಪ್ ಲಭ್ಯವಿದೆ. ಪ್ರಸ್ತುತ, ಇದು 18+ ಭಾಷೆಗಳನ್ನು NCERT, CBSE & SCERT ಗಳ ವಿವಿಧ ಪಠ್ಯಕ್ರಮಗಳನ್ನು ಬೆಂಬಲಿಸುತ್ತದೆ.

## ಅಧ್ಯಯನದ ಹಿನ್ನೆಲೆ :-

ಕರ್ನಾಟಕ ಸರ್ಕಾರ ಹಾಗೂ ಡಿ.ಎಸ್.ಇ.ಆರ್.ಟಿ. ಬೆಂಗಳೂರು ಇವರು ಸರ್ಕಾರಿ ಕಿರಿಯ/ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕರಿಗೆ "ದೀಕ್ಷಾ ಪೋರ್ಟಲ್ ಬಳಸಿಕೊಂಡು, ದೀಕ್ಷಾ ಆಪ್" ಹಾಗು ಇ-ಲರ್ನಿಂಗ್ ಪ್ರಯೋಜನಗಳನ್ನು ಬಳಸಿಕೊಂಡು ತಮ್ಮ ವೃತ್ತಿ ಅವಧಿಯನ್ನು ಅರ್ಥಮಾಡಿಕೊಳ್ಳಲು ಅನುವು ಮಾಡಿಕೊಡುತ್ತದೆ. ಅವರು ಶಾಲಾ ಕರ್ತವ್ಯಕ್ಕೆ ಸೇರಿದಾಗಿನಿಂದ, ನಿವೃತ್ತಿಯಾಗುವವರೆಗೆ, ತಮ್ಮ ವೃತ್ತಿಜೀವನದ ಪ್ರಗತಿಯನ್ನು ಗುರುತಿಸಿಕೊಂಡು, ಅದಕ್ಕೆ ತಕ್ಕಂತೆ ಕೌಶಲ್ಯಗಳ ಮೇಲೆ ಕರ್ತವ್ಯವನ್ನು ಇನ್ನೂ ಉತ್ತಮ ಪಡಿಸಿಕೊಳ್ಳಬಹುದು.

ದೀಕ್ಷಾ ಆಪ್ ಬಳಸಿಕೊಂಡು ಶಿಕ್ಷಕರಿಗೆ ಕಲಿಯಲು ಮತ್ತು ತರಬೇತಿ ನೀಡಲು ಸಹಾಯ ಮಾಡುತ್ತದೆ ಮತ್ತು ಕಲಿಕೆಯ ಮೌಲ್ಯಮಾಪನ ಬಳಸಿಕೊಳ್ಳಲು ಸಂಪನ್ಮೂಲವನ್ನು ಒದಗಿಸಿಕೊಡುತ್ತದೆ. ಇದು ಶಿಕ್ಷಕರಿಗೆ ವಿಷಯ, ಪ್ರೊಫೈಲ್, ತರಗತಿಯ ಸಂಪನ್ಮೂಲಗಳು, ಮೌಲ್ಯಮಾಪನ ಸಾಧನಗಳು, ಸುದ್ದಿ ಮತ್ತು ಪ್ರಕಟಣೆಗಳನ್ನು ರಚಿಸಲು ಮತ್ತು ಶಿಕ್ಷಕರ ಸಮುದಾಯದೊಂದಿಗೆ ಸಂಪರ್ಕ ಸಾಧಿಸಲು ಸಹಾಯ ಮಾಡುತ್ತದೆ.

### ವಿದ್ಯಾರ್ಥಿಗಳಿಗೆ ದೀಕ್ಷಾ ಆಪ್‌ನಿಂದಾಗುವ ಪ್ರಯೋಜನಗಳು

- ಶಿಕ್ಷಕರ ಮತ್ತು ವಿದ್ಯಾರ್ಥಿಗಳ ನಡುವೆ ನೇರ ಸಂವಹನ ಏರ್ಪಡುತ್ತದೆ.
- ವಿದ್ಯಾರ್ಥಿಗಳು ತಮ್ಮ ಪರಿಕಲ್ಪನೆಗಳನ್ನು ಸುಲಭ ಮತ್ತು ಸಂವಾದಾತ್ಮಕ ರೀತಿಯಲ್ಲಿ ಅರ್ಥಮಾಡಿಕೊಳ್ಳಲು ಸಾಧ್ಯವಾಗುತ್ತದೆ.
- ವಿದ್ಯಾರ್ಥಿಗಳಿಗೆ ತ್ವರಿತ ಪರಿಷ್ಕರಣೆ ಮಾಡಲು ಮತ್ತು ಸ್ವಯಂ-ಮೌಲ್ಯಮಾಪನ ಅಭ್ಯಾಸದ ಮೂಲಕ ಅವರ ಕಲಿಕೆಯನ್ನು ಪರೀಕ್ಷಿಸಲು ಅನುಕೂಲ ಮಾಡಿಕೊಡುತ್ತದೆ.

## ಪೋಷಕರಿಗೆ ದೀಕ್ಷಾ ಆಪ್‌ನಿಂದಾಗುವ ಪ್ರಯೋಜನಗಳು

- ಪೋಷಕರು ತರಗತಿಯ ಚಟುವಟಿಕೆಗಳನ್ನು ವೀಕ್ಷಿಸಬಹುದು ಮತ್ತು ಶಿಕ್ಷಕರೊಂದಿಗೆ ಒಂದು ಅವಧಿವರೆಗೆ ತಮ್ಮ ಸಂದೇಹಗಳನ್ನು ಶಾಲೆಯ ಸಮಯದ ಹೊರಗೆ ಪರಿಹರಿಸಿಕೊಳ್ಳಬಹುದು.

ಮೇಲ್ಕಂಡ ಅಂಶಗಳನ್ನು ಗಮನಿಸಿ, ಚಿತ್ರದುರ್ಗ ಜಿಲ್ಲೆಯ ತಾಲ್ಲೂಕುಗಳಾದ ಚಿತ್ರದುರ್ಗ, ಚಳ್ಳಕೆರೆ, ಹಿರಿಯೂರು, ಹೊಸದುರ್ಗ, ಹೊಳಲ್ಕೆರೆ ಮತ್ತು ಮೊಳಕಾಲ್ಮೂರುಗಳ ಸರ್ಕಾರಿ ಕಿರಿಯ ಹಾಗು ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕರಿಗಳಿಗೆ ಕೋವಿಡ್–19 ರ ಸಾಂಕ್ರಾಮಿಕ ಪಿಡುಗಿನ ಸಂದರ್ಭದಲ್ಲಿ "ದೀಕ್ಷಾ ಆಪ್" ಬಳಕೆ ಮಾಡಿಕೊಂಡು, ಶಿಕ್ಷಕರ ವೃತ್ತಿ ಬೆಳವಣಿಗೆ ಹಾಗೂ ಮಕ್ಕಳ ಕಲಿಕೆಗೆ ಅಗತ್ಯ ವೇದಿಕೆಗಳನ್ನು ಹಮ್ಮಿಕೊಳ್ಳುವ ಅಂಶಗಳನ್ನು ಒಳಗೊಂಡ ಮಾಹಿತಿ ಹಾಗೂ ತರಬೇತಿ ವಿನ್ಯಾಸಗಳ ಅಧ್ಯಯನ ಕುರಿತು ಈ ವಿಶ್ಲೇಷಣೆಯನ್ನು ಕೈಗೊಳ್ಳಲಾಗಿದೆ.

ಈ ಅಧ್ಯಯನವನ್ನು ಕೈಗೊಳ್ಳಲು ಡಯಟ್‌ನ ಪ್ರಾಂಶುಪಾಲರಾದ ಶ್ರೀ ಎಸ್.ಕೆ.ಬಿ.ಪ್ರಸಾದ್ ರವರು ಮಾರ್ಗದರ್ಶನ, ಸಲಹೆ–ಸೂಚನೆಗಳನ್ನು ನೀಡಿ, ಸಹಕರಿಸಿದ್ದು, ಅವರಿಗೆ ತುಂಬು ಹೃದಯದ ಧನ್ಯವಾದಗಳನ್ನು ಸಮರ್ಪಿಸುತ್ತೇನೆ.

## ಅಧ್ಯಯನದ ಉದ್ದೇಶಗಳು :-

ಸರ್ಕಾರಿ ಕಿರಿಯ/ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕರು ದೀಕ್ಷಾ ಪೋರ್ಟಲ್ ಬಳಸಿ, ದೀಕ್ಷಾ ಆಪ್ ಬಳಕೆ ಮಾಡಿಕೊಂಡು ಅದರ ಉಪಯೋಗದ ಪರಿಮಾಣಾತ್ಮಕ ಅಧ್ಯಯನಕ್ಕೆ ಸಂಬಂಧಿಸಿದಂತೆ, ಕೆಳಕಂಡ ಸಾಮಾನ್ಯ ಹಾಗೂ ನಿರ್ಧಿಷ್ಟ ಉದ್ದೇಶಗಳನ್ನು ಪರಿಮಾಣಾತ್ಮಕವಾಗಿ ಹೊಂದಲಾಗಿದೆ.

## ಅಧ್ಯಯನದ ಸಾಮಾನ್ಯ ಉದ್ದೇಶ :-

ಸರ್ಕಾರಿ ಕಿರಿಯ/ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕರು ದೀಕ್ಷಾ ಪೋರ್ಟಲ್ ಬಳಸಿ, ದೀಕ್ಷಾ ಆಪ್ ಬಳಕೆ ಮಾಡಿಕೊಂಡು, ಉಪಯೋಗಿಸಿದ ನಂತರದ ಪರಿಮಾಣಾತ್ಮಕ ಅಧ್ಯಯನಕ್ಕೆ ಸಂಬಂಧಿಸಿದಂತೆ ವಸ್ತುನಿಷ್ಠ ವಿಶ್ಲೇಷಣೆ ಮಾಡಿ ದತ್ತಾಂಶವನ್ನು ನೀಡುವುದು".

## ಅಧ್ಯಯನದ ನಿರ್ಧಿಷ್ಟ ಉದ್ದೇಶಗಳು :-

1. ಶಿಕ್ಷಕರು ದೀಕ್ಷಾ ಆಪ್ ಬಳಕೆಯನ್ನು ಕ್ರಮಬದ್ಧವಾಗಿ ಬಳಸುವುದು.

2. ದೀಕ್ಷಾ, ದೀಕ್ಷಾ ಆಪ್ ಬಳಕೆಯ ಉದ್ದೇಶಗಳು, ದೀಕ್ಷಾ ಆಪ್‌ನಲ್ಲಿನ ಕೋರ್ಸ್‌ಗಳ ಪುನರ್‌ಮನನ ಮಾಡಿಕೊಂಡು, ನಂತರದಲ್ಲಿ ಅವುಗಳ ಬಳಕೆಯ ಮತ್ತು ಅಳವಡಿಕೆಗಳ ಕುರಿತು ಅಧ್ಯಯಿಸುವುದು.

4. ದೀಕ್ಷಾ ಆಪ್ ಬಳಕೆಯಿಂದ ಆಗುವ ಉಪಯೋಗ, ಅನುಕೂಲಗಳ ಕುರಿತು ಕೌತುಕ ಮತ್ತು ಆಸಕ್ತಿಯನ್ನು ಬೆಳೆಸುವ ಅಂಶಗಳಿವೆಯೇ ಎಂಬುದನ್ನು ವಿಶ್ಲೇಷಿಸುವುದು.

ಮೇಲ್ಕಂಡ ಉದ್ದೇಶಗಳನ್ನು ಗಮನಿಸಿಕೊಂಡು, ಶಿಕ್ಷಕರ ಶೈಕ್ಷಣಿಕ ಅಭಿವೃದ್ಧಿಗೆ ಈ ಅಧ್ಯಯನವು ಸಹಕಾರಿಯಾಗಲೆಂಬ ಉದ್ದೇಶಗಳನ್ನು ಹೊಂದಿ, ಪ್ರಸ್ತುತ ಅಧ್ಯಯನವನ್ನು ಕೈಗೊಳ್ಳಲಾಗಿದೆ.

## ಅಧ್ಯಯನ ವಿಧಾನ :-

ದೀಕ್ಷಾ ಆಪ್ ಬಳಕೆ ಹಾಗು ನಂತರದ ಚಟುವಟಿಕೆಗಳ ಪರಿಮಾಣಾತ್ಮಕ ಕುರಿತು, ಆನ್‌ಲೈನ್ ಸಂದರ್ಶನ ವಿಧಾನದ ಮೂಲಕ ವಿಶ್ಲೇಷಣೆ ಕೈಗೊಳ್ಳಲಾಗಿದೆ.

: ಪಠ್ಯಪುಸ್ತಕದ ಅಧ್ಯಯನಕ್ಕೆ ಪೂರಕವಾದ ಪ್ರಶ್ನಾವಳಿ ರಚನಾ ಕಾರ್ಯಾಗಾರ :

ದಿನಾಂಕ : 11:09:2020 ರಂದು ಡಯಟ್, ಚಿತ್ರದುರ್ಗದಲ್ಲಿ ದೀಕ್ಷಾ ಆಪ್ ಸಂಪನ್ಮೂಲ ಶಿಕ್ಷಕರನ್ನು ಆಹ್ವಾನಿಸಿ, ಅಧ್ಯಯನಕ್ಕೆ ಪೂರಕವಾದ ಪ್ರಶ್ನೆಪತ್ರಿಕೆ ಹಾಗೂ ಸಲಹೆ–ಸೂಚನೆಗಳನ್ನು ನೀಡುವ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಯಿತು. ಅದರಂತೆ, ಇ.ಸಿ.ಓ/ಬಿ.ಆರ್.ಪಿ./ಸಿ.ಆರ್.ಪಿ. ಹಾಗೂ ಶಿಕ್ಷಕರಿಗೆ ಸಂಬಂಧಿಸಿದಂತೆ, ಏಕರೂಪದ ಪ್ರಶ್ನಾವಳಿಯನ್ನು ತಯಾರಿಸಿಕೊಟ್ಟರು.

| ಕ್ರ.ಸಂ | ತಾಲ್ಲೂಕು | ಸಂಪನ್ಮೂಲ ಶಿಕ್ಷಕರ ಹೆಸರು | ಶಾಲೆಯ ಹೆಸರು |
|---|---|---|---|
| 1 | ಹಿರಿಯೂರು | | |
| 2 | ಮೊಳಕಾಲ್ಮೂರು | ಉಮೇಶಯ್ಯ ಜಿ.ವಿ | ಬಿ.ಆರ್.ಪಿ. ಬಿ.ಆರ್.ಸಿ. ಮೊಳಕಾಲ್ಮೂರು |
| 3 | ಚಳ್ಳಕೆರೆ | ಪ್ರಸನ್ನ ಮಂಡೇಲ | ಬಿ.ಆರ್.ಪಿ. ಬಿ.ಆರ್.ಸಿ. ಚಳ್ಳಕೆರೆ |
| 4 | ಹೊಸದುರ್ಗ | ಎನ್.ರಂಗನಾಥ್ | ಬಿ.ಆರ್.ಪಿ. ಬಿ.ಆರ್.ಸಿ. ಹೊಸದುರ್ಗ |
| 5 | ಹೊಳಲ್ಕೆರೆ | ಶಾಂತಕುಮಾರ್ | ಬಿ.ಆರ್.ಪಿ. ಬಿ.ಆರ್.ಸಿ. ಹೊಳಲ್ಕೆರೆ |
| 6 | ಚಿತ್ರದುರ್ಗ | ಖಲಂದರ್ | ಬಿ.ಆರ್.ಪಿ. ಬಿ.ಆರ್.ಸಿ. ಚಿತ್ರದುರ್ಗ |

## ಪ್ರಶ್ನಾವಳಿಗಳ ಬಳಕೆಯ ವಿಧಾನ :–

ಚಿತ್ರದುರ್ಗ ಜಿಲ್ಲೆಯ 06 ತಾಲ್ಲೂಕುಗಳಾದ, ಚಿತ್ರದುರ್ಗ, ಚಳ್ಳಕೆರೆ, ಹಿರಿಯೂರು, ಹೊಸದುರ್ಗ, ಹೊಳಲ್ಕೆರೆ ಹಾಗೂ ಮೊಳಕಾಲ್ಮೂರು ತಾಲ್ಲೂಕುಗಳಲ್ಲಿನ ಆಯ್ದ ಬಿ.ಆರ್.ಪಿ/ಸಿ.ಆರ್.ಪಿ.ಗಳು ಹಾಗೂ ಆಯ್ದ ಸರ್ಕಾರಿ ಕಿರಿಯ/ಹಿರಿಯ ಹಾಗೂ ಉನ್ನತೀಕರಿಸಿದ ಪ್ರಾಥಮಿಕ ಶಾಲೆಗಳಲ್ಲಿನ ತಲಾ 02 ಶಿಕ್ಷಕರಿಗೆ ಆನ್‌ಲೈನ್ ಮೂಲಕ ಅಧ್ಯಯನಕ್ಕೆ ಪೂರಕವಾಗಿರುವ ಪ್ರಶ್ನಾವಳಿಯನ್ನು ಆನ್‌ಲೈನ್ ಸಂದರ್ಶನದ ಮೂಲಕ ದತ್ತಾಂಶವನ್ನು ಪಡೆದುಕೊಳ್ಳಲಾಯಿತು.

## ಶಾಲೆಗಳ ಆಯ್ಕೆ :–

ಶಾಲೆಗಳನ್ನು ಯಾದೃಚ್ಚಿಕವಾಗಿ ಆಯ್ಕೆ ಮಾಡಿಕೊಂಡು, ದೀಕ್ಷಾ ಆಪ್ ಬಳಕೆಯ ಹಾಗೂ ನಂತರದ ಪರಿಣಾಮ ಕುರಿತು ದತ್ತಾಂಶಗಳನ್ನು ಪಡೆಯಲು ಕೆಳಕಂಡಂತೆ ಶಾಲೆಗಳನ್ನು ಆಯ್ಕೆ ಮಾಡಿಕೊಂಡು, ಪ್ರತಿ ಶಾಲೆಯಿಂದ 02 ಶಿಕ್ಷಕರನ್ನು ಆಯ್ಕೆಮಾಡಿ, ಆನ್–ಲೈನ್ ಮೂಲಕ ಪ್ರಶ್ನೆಗಳನ್ನು ಕೇಳಿ, ದತ್ತಾಂಶಗಳನ್ನು ಪಡೆಯಲಾಗಿದೆ.

| ತಾಲ್ಲೂಕುಗಳು | ಬಿ.ಆರ್.ಪಿ. | ಸಿ.ಆರ್.ಪಿ. | ಸ.ಹಿ.ಪ್ರಾ.ಶಾಲೆ | ಸ.ಹಿ.ಪ್ರಾ.ಶಾಲೆ | ಸ.ಹಿ.ಪ್ರಾ.ಶಾಲೆ | ಸ.ಹಿ.ಪ್ರಾ.ಶಾಲೆ |
|---|---|---|---|---|---|---|
| ಚಿತ್ರದುರ್ಗ | 02 | 04 | ಕ್ಯಾದಿಗ್ಗೆರೆ | ಡಿ.ಎಸ್.ಹಳ್ಳಿ | ಗೋಣೂರು | ಕ್ಯಾಸಾಪುರ |
| ಚಳ್ಳಕೆರೆ | 02 | 04 | ನೇರಲಗುಂಟೆ | ನಾಯಕನಹಟ್ಟಿ | ಸಾಣಿಕೆರೆ | ಪರಶುರಾಂಪುರ |
| ಹಿರಿಯೂರು | 02 | 04 | ಯರಬಳ್ಳಿ | ಜೆ.ಜಿ.ಹಳ್ಳಿ | ಮಸ್ಕಲ್ | ಧರ್ಮಪುರ |
| ಹೊಸದುರ್ಗ | 02 | 04 | ಶ್ರೀರಾಂಪುರ | ಅಶೋಕ ರಂಗಮಂದಿರ | ಗೂಳಿಹಟ್ಟಿ | ದುಗ್ಗಾವರ |
| ಹೊಳಲ್ಕೆರೆ | 02 | 04 | ಮಲ್ಲಾಡಿಹಳ್ಳಿ | ತಾಳೀಕಟ್ಟೆ | ತಾಳ್ಯ | ಆರ್.ನೂಲೇನೂರು |
| ಮೊಳಕಾಲ್ಮೂರು | 02 | 04 | ಕೋನಸಾಗರ | ರಾಂಪುರ | ಬಿ.ಜಿ.ಕೆರೆ | ಕೊಂಡ್ಲಹಳ್ಳಿ |

ಮೇಲ್ಕಂಡಂತೆ, ಪ್ರತಿ ತಾಲ್ಲೂಕಿನಲ್ಲಿ 04 ಶಾಲೆಗಳನ್ನು ಯಾದೃಚ್ಛಿಕವಾಗಿ ಆಯ್ಕೆ ಮಾಡಿಕೊಂಡು, ಶಾಲೆಗಳ ಭೇಟಿಗೆ ಸಿದ್ಧತೆ ಮಾಡಿಕೊಳ್ಳಲಾಯಿತು.

: ಶಾಲೆಗಳ ಭೇಟಿ ಮಾಡಿ ದತ್ತಾಂಶ ಪಡೆಯುವ ಕಾರ್ಯಕ್ರಮ :–

2.5 (3) ರಲ್ಲಿ ತಿಳಿಸಿರುವಂತೆ ಶಾಲೆಗಳನ್ನು ಕೆಳಕಂಡ ಅಧಿಕಾರಿಗಳು ಹಾಗೂ ಸಂಪನ್ಮೂಲ ವ್ಯಕ್ತಿಗಳು ಆನ್‌ಲೈನ್ ಮೂಲಕ ಪ್ರಶ್ನೆಗಳನ್ನು ಕೇಳಿ, ಅಧ್ಯಯನಕ್ಕೆ ಪೂರಕವಾದ ದತ್ತಾಂಶವನ್ನು ಪಡೆದುಕೊಂಡಿರುತ್ತಾರೆ.

| ತಾಲ್ಲೂಕು | ಸಂದರ್ಶಿಸಿದವರ ಹೆಸರು |
|---|---|
| ಚಿತ್ರದುರ್ಗ | ಜಿ.ಎಸ್.ನಾಗರಾಜ್, ಉಪನ್ಯಾಸಕರು, ಡಯಟ್, ಚಿತ್ರದುರ್ಗ |
| ಚಳ್ಳಕೆರೆ | ಜಿ.ಎಸ್.ನಾಗರಾಜ್, ಉಪನ್ಯಾಸಕರು, ಡಯಟ್, ಚಿತ್ರದುರ್ಗ |
| ಹಿರಿಯೂರು | ಜಿ.ಎಸ್.ನಾಗರಾಜ್, ಉಪನ್ಯಾಸಕರು, ಡಯಟ್, ಚಿತ್ರದುರ್ಗ |
| ಹೊಸದುರ್ಗ | ಜಿ.ಎಸ್.ನಾಗರಾಜ್, ಉಪನ್ಯಾಸಕರು, ಡಯಟ್, ಚಿತ್ರದುರ್ಗ |
| ಹೊಳಲ್ಕೆರೆ | ಎಂ.ಎಲ್.ತಿಮ್ಮರಾಜ್, ಸ.ಶಿ. ನೀಲಯ್ಯನಹಟ್ಟಿ, ಚಿತ್ರದುರ್ಗ |
| ಮೊಳಕಾಲ್ಮೂರು | ಎಂ.ಎಲ್.ತಿಮ್ಮರಾಜ್, ಸ.ಶಿ. ನೀಲಯ್ಯನಹಟ್ಟಿ, ಚಿತ್ರದುರ್ಗ |

# ದೀಕ್ಷಾ ಆಪ್ ಬಳಕೆ ಹಾಗೂ ಸದುಪಯೋಗದ ಕುರಿತು ಆನ್‌ಲೈನ್ ಸಂದರ್ಶನದ ದತ್ತಾಂಶ ವಿಶ್ಲೇಷಣೆ

ದೀಕ್ಷಾ ಆಪನ್ನು ಬಳಸುವ ವಿಧಾನದ ಪಕ್ಷಿನೋಟ :-

## ಕೋರ್ಸ್‌ನ ಸೂಚನೆಗಳು

### ಕಲಿಕಾರ್ಥಿಗಳಿಗೆ ಸೂಚನೆಗಳು

ಪ್ರಾಥಮಿಕ ಶಾಲಾ ಮುಖ್ಯಸ್ಥರು ಮತ್ತು ಶಿಕ್ಷಕರುಗಳಿಗೆ ನಿಷ್ಠಾ ಕಾರ್ಯಕ್ರಮಕ್ಕೆ ಸ್ವಾಗತ. ಪ್ರತಿ ಶಾಲಾ ಮುಖ್ಯಸ್ಥ/ಶಿಕ್ಷಕ 12 ಜೆನರಿಕ್ ಕೋರ್ಸ್ ಮತ್ತು ತಾವು ಬೋಧಿಸುವ ವಿಷಯದ ಕನಿಷ್ಠ ಒಂದು ಬೋಧನಾಶಾಸ್ತ್ರ ಕೋರ್ಸನ್ನು ಅಭ್ಯಸಿಸುವುದನ್ನು ನಿರೀಕ್ಷಿಸಿದೆ.

### ಕೋರ್ಸ್‌ನ ವಿಧಾನ


ಪ್ರತಿ ಕಲಿಕಾರ್ಥಿಯು ಶೇಕಡಾ 100 ಕೋರ್ಸ್ ಪೂರ್ಣಗೊಳಿಸಲು ವೀಡಿಯೋಗಳು, ಪಠ್ಯ ಸಂಪನ್ಮೂಲಗಳು ಮತ್ತು ವಿವಿಧ ಅಭ್ಯಾಸ ಚಟುವಟಿಕೆಗಳ ರೂಪದಲ್ಲಿ ಪ್ರಸ್ತುತಪಡಿಸಿದ ಎಲ್ಲಾ ಕೋರ್ಸ್ ವಿಷಯಗಳನ್ನು ಅಭ್ಯಸಿಸುವುದು ಕಡ್ಡಾಯವಾಗಿದೆ. ಈ ಕೋರ್ಸ್ ವಿಷಯವನ್ನು ಮೀರಿ ಕಲಿಕೆಯನ್ನು ವಿಸ್ತಿಸಿಕೊಳ್ಳಲು ಹೆಚ್ಚುವರಿ ಸಂಪನ್ಮೂಲಗಳನ್ನು ಒದಗಿಸಲಾಗಿದೆ.

### ಪ್ರಮಾಣೀಕರಣ


ಕೋರ್ಸ್‌ನ ಕೊನೆಯಲ್ಲಿ ಕಲಿಕಾರ್ಥಿಗಳು ವಸುನಿಷ್ಠ ಆಧಾರಿತ ರಸಪ್ರಶ್ನೆ ತೆಗೆದುಕೊಳ್ಳುವುದನ್ನು ನಿರೀಕ್ಷಿಸಿದೆ. ಅಂತಿಮ ಮೌಲ್ಯಾಂಕನದಲ್ಲಿ ಗರಿಷ್ಟ 3 ಪ್ರಯತ್ನಗಳಲ್ಲಿ ಶೇಕಡಾ 70 ಗಳಿಸಿದ ಕಲಿಕಾರ್ಥಿಗಳು "ದೀಕ್ಷಾ ಪೋರ್ಟಲ್‌ನಲ್ಲಿಯೇ ಆನ್-ಲೈನ್‌ನಲ್ಲಿ "ಪ್ರಮಾಣಪತ್ರ"ವನ್ನು 0-15 ದಿನಗಳೊಳಗಾಗಿ ಪಡೆಯುತ್ತಾರೆ. ಮುಂದೆ ನೀಡಿರುವ ಹಂತಗಳನ್ನು ಅನುಸರಿಸಿ "ದೀಕ್ಷಾ" ಪೋರ್ಟಲ್‌ನಲ್ಲಿರುವ ಪ್ರೊಫೈಲ್ ಪುಟದಿಂದ ಡೌನ್‌ಲೋಡ್ ಮಾಡಬಹುದು.

**ಹಂತ 1:** ಪ್ರೊಫೈಲ್ ಪುಟಕ್ಕೆ ಹೋಗಿ, ಪ್ರೊಫೈಲ್‌ಗೆ ಹೋಗಲು, ನಿಮ್ಮ ಮೊಬೈಲ್‌ನ ಸ್ಕ್ರೀನ್‌ನ ಮೇಲಿನ ಬಲ ಮೂಲೆಯಲ್ಲಿ ಕೆಂಪು ಬಾಕ್ಸ್‌ನಲ್ಲಿ ಹೈಲೈಟ್ ಮಾಡಿರುವ ನಿಮ್ಮ ಮೊದಲ ಹೆಸರಿನ ಅಕ್ಷರವಿರುವ ಸರ್ಕಲ್ ಐಕಾನ್ ಮೇಲೆ ಕ್ಲಿಕ್ ಮಾಡಿ.


“ದೀಕ್ಷಾ” ಪೋರ್ಟಲ್‌ನಲ್ಲಿ ಪ್ರಮಾಣಪತ್ರವನ್ನು ಹೇಗೆ ಪ್ರವೇಶಿಸುವುದು ಮತ್ತು ಡೌನ್‌ಲೋಡ್ ಮಾಡುವುದು.




**ಹಂತ 2:** ಗೋಚರಿಸುವ ಬಲಭಾಗದಲ್ಲಿರುವ ಮೆನುವಿನಿಂದ ಕೆಂಪುಬಾಕ್ಸ್‌ನಲ್ಲಿ ಹೈಲೈಟ್ ಮಾಡಿರುವ ಪ್ರೊಫೈಲ್ ಆಯ್ಕೆಯನ್ನು ಆರಿಸಿ.



**ಹಂತ 3:** ನಂತರ ನಿಮ್ಮ ಪ್ರೋಫೈಲ್ ವಿಭಾಗವು ಕಾಣಿಸಿಕೊಳ್ಳುತ್ತದೆ. ಅದೇ ಪುಟದಲ್ಲಿ ಮತ್ತಷ್ಟು ಕೆಳಗೆ ಸ್ಕ್ರಾಲ್ ಮಾಡಿ ಮತ್ತು ನಿಮ್ಮ ಮೈ-ಲರ್ನಿಂಗ್ ಮತ್ತು ಲರ್ನರ್ ಪಾಸ್‌ಬುಕ್ ವಿಭಾಗವನ್ನು ಕಾಣುತ್ತೀರಿ, ತದನಂತರ ಕೆಂಪುಬಾಕ್ಸ್‌ನಲ್ಲಿ ಹೈಲೈಟ್ ಮಾಡಿರುವ "ಡೌನ್‌ಲೋಡ್ ಪ್ರಮಾಣಪತ್ರ" ಬಟನ್ ಕ್ಲಿಕ್ ಮಾಡಿ. ಪೂರ್ಣಗೊಂಡ ಕೋರ್ಸ್ ಮತ್ತು ನಿಮ್ಮ ಪ್ರಮಾಣಪತ್ರವು ಡೌನ್‌ಲೋಡ್ ಆಗಲು ಪ್ರಾರಂಭಿಸುತ್ತದೆ.



ದೀಕ್ಷಾ ಪೋರ್ಟಲ್‌ನ 12 ಜೆನರಿಕ್ ಕೋರ್ಸ್ ಮತ್ತು ಶಿಕ್ಷಕರು ಬೋಧಿಸುವ ವಿಷಯದ ಕನಿಷ್ಠ ಒಂದು ಬೋಧನಾಶಾಸ್ತ್ರ ಕೋರ್ಸನ್ನು ಅಭ್ಯಸಿಸುವುದನ್ನು ನಿರೀಕ್ಷಿಸಿದೆ. ಅವು ಯಾವುವೆಂದರೆ,

**ದೀಕ್ಷಾ ಪೋರ್ಟಲ್‌ನ 12 ಜೆನರಿಕ್ ಕೋರ್ಸ್‌ಗಳು**

1. ಪಠ್ಯಕ್ರಮ ಮತ್ತು ಸಮನ್ವಯ ತರಗತಿ ಕೋಣೆಗಳು
2. ಸುರಕ್ಷಿತ ಮತ್ತು ಆರೋಗ್ಯಕರ ಶಾಲಾ ಪರಿಸರ ನಿರ್ಮಾಣಕ್ಕಾಗಿ ಅಭಿವೃದ್ಧಿ (ವೈಯಕ್ತಿಕ ಸಾಮಾಜಿಕ ಗುಣಗಳು)
3. ಶಾಲೆಗಳಲ್ಲಿ ಆರೋಗ್ಯ ಮತ್ತು ಕ್ಷೇಮ
4. ಬೋಧನಾ ಕಲಿಕಾ ಪ್ರಕ್ರಿಯೆಯಲ್ಲಿ ಜೆಂಡರ್ ಸಮನ್ವಯತೆ
5. ಐಸಿಟಿ ಸಮ್ಮಿಳಿತ ಬೋಧನೆ, ಕಲಿಕೆ ಮತ್ತು ಮೌಲ್ಯಾಂಕನ
6. ಕಲಾ ಸಮ್ಮಿಳಿತ ಕಲಿಕೆ
7. ಶಾಲಾ ಆಧಾರಿತ ಮೌಲ್ಯಾಂಕನ
8. ಪರಿಸರ ಅಧ್ಯಯನ ಶಿಕ್ಷಣಶಾಸ್ತ್ರ
9. ಗಣಿತದ ಶಿಕ್ಷಣಶಾಸ್ತ್ರ
10. ಸಮಾಜ ವಿಜ್ಞಾನದ ಶಿಕ್ಷಣಶಾಸ್ತ್ರ
11. ಭಾಷಾ ಶಿಕ್ಷಣಶಾಸ್ತ್ರ
12. ವಿಜ್ಞಾನ ಶಿಕ್ಷಣಶಾಸ್ತ್ರ

**ದೀಕ್ಷಾ ಪೋರ್ಟಲ್‌ನ 01 ಬೋಧನಾಶಾಸ್ತ್ರ ಕೋರ್ಸ್**

1. ಶಾಲಾ ನಾಯಕತ್ವ : ಪರಿಕಲ್ಪನೆಗಳು ಮತ್ತು ಅನ್ವಯಗಳು
2. ಶಾಲಾ ಶಿಕ್ಷಣದಲ್ಲಿ ಉಪಕ್ರಮಗಳು
3. ಶಾಲಾ ಪೂರ್ವ ಶಿಕ್ಷಣ
4. ವೃತ್ತಿಪೂರ್ವ ಶಿಕ್ಷಣ
5. ಕೋವಿಡ್–19ರ ಸನ್ನಿವೇಶ : ಶಾಲಾಶಿಕ್ಷಣದಲ್ಲಿನ ಸವಾಲುಗಳನ್ನು ಎದುರಿಸುವುದು.
6. ಮಕ್ಕಳ ಹಕ್ಕುಗಳು– CSA, POCSO-2012

# ದೀಕ್ಷಾ ಪೋರ್ಟಲ್ – ವಿಶ್ಲೇಷಣಾ ಕಾರ್ಯದ ವರದಿ

ಪ್ರಸ್ತುತ ಅಧ್ಯಯನಕ್ಕೆ ಪ್ರಮುಖವಾಗಿ ಬಿ.ಆರ್.ಪಿ./ಸಿ.ಆರ್.ಪಿ./ದೀಕ್ಷಾ ಪೋರ್ಟಲ್ ಸಂಪನ್ಮೂಲ ವ್ಯಕ್ತಿಗಳು ಹಾಗೂ ಮುಖ್ಯಶಿಕ್ಷಕರು ಮತ್ತು ಸಹಶಿಕ್ಷಕರುಗಳಿಗೆ ದೀಕ್ಷಾ ಪೋರ್ಟಲ್ ಕುರಿತಾದ ಪ್ರಶ್ನಾವಳಿಗಳನ್ನು ತಯಾರಿಸಿಕೊಂಡು, ಆನ್-ಲೈನ್ ಮೂಲಕ ಪ್ರಶ್ನೆಗಳನ್ನು ಕೇಳಿ, ದತ್ತಾಂಶಗಳನ್ನು ಪಡೆದು, ಅಧ್ಯಯನಕ್ಕೆ ಒಳಪಡಿಸಿದೆ.


## ವಿಭಾಗ –01 :ತಾಲ್ಲುಕುವಾರು ಶಾಲಾ ಮಾಹಿತಿಗಳು :

ಚಿತ್ರದುರ್ಗ ಜಿಲ್ಲೆಯ ತಾಲ್ಲೂಕುಗಳ ಹೆಸರುಗಳು;

1. ಚಿತ್ರದುರ್ಗ
2. ಚಳ್ಳಕೆರೆ
3. ಹಿರಿಯೂರು
4. ಹೊಸದುರ್ಗ
5. ಹೊಳಲ್ಕೆರೆ
6. ಮೊಳಕಾಲ್ಮೂರು

### 1. ತಾಲ್ಲೂಕುವಾರು ಕ್ಲಸ್ಟರ್‌ಗಳ ವಿವರ


| SL NO | BLOCK | CLUSTER |
|---|---|---|
| **1** | **CHITRADURGA** | **34** |
| 2 | CHALLAKERE | 31 |
| **3** | HIRIYUR | 28 |
| 4 | HOSADURGA | 25 |
| **5** | HOLALKERE | 21 |
| 6 | MOLAKALMURU | 12 |




ಚಿತ್ರದುರ್ಗ ಜಿಲ್ಲೆಯಲ್ಲಿ ಒಟ್ಟು 06 ತಾಲ್ಲೂಕುಗಳಿಂದ 151 ಕ್ಲಸ್ಟರ್‌ಗಳಿವೆ.

## 2. ಶಾಲೆ ಇರುವ ಪ್ರದೇಶ.


| SL NO | BLOCK | RURAL | URBAN |
|---|---|---|---|
| **1** | **CHITRADURGA** | **278** | **59** |
| 2 | CHALLAKERE | 345 | 44 |
| **3** | HIRIYUR | 298 | 22 |
| 4 | HOSADURGA | 298 | 12 |
| **5** | HOLALKERE | 219 | 9 |
| 6 | MOLAKALMURU | 130 | 18 |




ಮೇಲ್ಕಂಡ ಕೋಷ್ಟಕವು ತಾಲ್ಲೂಕುವಾರು ಶಾಲೆಗಳನ್ನು ಸೂಚಿಸುತ್ತಿದ್ದು, ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿರುವುದನ್ನು ಸೂಚಿಸುತ್ತದೆ.

## 3. ಶಾಲೆಯ ವರ್ಗ :


| ಕ್ರ.ಸಂ | ತಾಲ್ಲೂಕಿನ ಹೆಸರು | ಕಿರಿಯ ಪ್ರಾಥಮಿಕ | ಹಿರಿಯ ಪ್ರಾಥಮಿಕ |
|---|---|---|---|
| | | 1--5 | 1--8 |
| 1 | ಚಿತ್ರದುರ್ಗ | 110 | 227 |
| 2 | ಚಳ್ಳಕೆರೆ | 201 | 185 |
| 3 | ಹಿರಿಯೂರು | 158 | 162 |
| 4 | ಹೊಸದುರ್ಗ | 115 | 113 |
| 5 | ಹೊಳಲ್ಕೆರೆ | 163 | 147 |
| 6 | ಮೊಳಕಾಲ್ಮೂರು | 67 | 81 |




ಮೇಲ್ಕಂಡ ಶಾಲೆಗಳು ಚಿತ್ರದುರ್ಗ ಜಿಲ್ಲೆಯಲ್ಲಿ ತಾಲ್ಲೂಕುವಾರು ಕಿರಿಯ ಪ್ರಾಥಮಿಕ ಹಾಗು ಹಿರಿಯ ಪ್ರಾಥಮಿಕ ಹಾಗೂ ಟಿ.ಜಿ.ಟಿ.ಶಾಲೆಗಳ ಸಂಖ್ಯೆಯನ್ನು ಸೂಚಿಸುತ್ತದೆ.

## 4. ತಾಲ್ಲೂಕುವಾರು ಶಿಕ್ಷಕರ ಸಂಖ್ಯೆ :

| SL NO | BLOCK | TEACHERS-RURAL | | TEACHERS-URBAN | |
|---|---|---|---|---|---|
| | | SANCTIONED PRIMARY | WORKING PRIMARY | SANCTIONED PRIMARY | WORKING PRIMARY |
| **1** | **CHITRADURGA** | **1188** | **1121** | **237** | **235** |
| **2** | **CHALLAKERE** | **1359** | **1186** | **152** | **151** |
| **3** | **HIRIYUR** | **1010** | **955** | **96** | **95** |
| **4** | **HOSADURGA** | **960** | **930** | **58** | **50** |
| **5** | **HOLALKERE** | **745** | **740** | **51** | **43** |
| **6** | **MOLAKALMURU** | **655** | **431** | **73** | **60** |





ಮೇಲ್ಕಂಡ ಕೋಷ್ಟಕವು ತಾಲ್ಲೂಕುವಾರು ಶಿಕ್ಷಕರ ಸಂಖ್ಯೆಯನ್ನು ಸೂಚಿಸುತ್ತಿದ್ದು, ಗ್ರಾಮೀಣ ಹಾಗೂ ನಗರಮಟ್ಟದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶಿಕ್ಷಕರ ಸಂಖ್ಯೆಯನ್ನು ಸೂಚಿಸುತ್ತದೆ.

## ವಿಭಾಗ –02 : ದೀಕ್ಷಾ ಆಪ್ ಬಳಕೆ: ಸಾಧನ ಹಾಗೂ ಸಂಪರ್ಕಗಳ ದೊರಕುವಿಕೆ

### 1. ಶಿಕ್ಷಕರು ತಮ್ಮ ಕೆಲಸಕ್ಕಾಗಿ ಹೊಂದಿರುವ ಮತ್ತು ಬಳಸುವ ಸಾಧನಗಳು :


| ಕ್ರ.ಸಂ | ತಾಲ್ಲೂಕಿನ ಹೆಸರು | ಒಟ್ಟು ಶಿಕ್ಷಕರು | ಮೊಬೈಲ್ ಸ್ಮಾರ್ಟ್‌ಫೋನ್ | ಟ್ಯಾಬ್ಲೆಟ್ | ಕಂಪ್ಯೂಟರ್/ಲ್ಯಾಪ್‌ಟಾಪ್/ಡೆಸ್ಕ್ ಟಾಪ್ | ಇತರೆ |
|---|---|---|---|---|---|---|
| 1 | ಚಿತ್ರದುರ್ಗ | 1356 | 1331 | 12 | 8 | 5 |
| 2 | ಚಳ್ಳಕೆರೆ | 1337 | 1306 | 15 | 10 | 6 |
| 3 | ಹಿರಿಯೂರು | 1050 | 1021 | 13 | 12 | 4 |
| 4 | ಹೊಸದುರ್ಗ | 980 | 950 | 12 | 15 | 3 |
| 5 | ಹೊಳಲ್ಕೆರೆ | 783 | 769 | 10 | 2 | 2 |
| 6 | ಮೊಳಕಾಲ್ಮೂರು | 491 | 488 | 2 | 1 | 0 |




ಮೇಲ್ಕಂಡ ಕೋಷ್ಟಕವು ತಾಲ್ಲೂಕುವಾರು ಶಿಕ್ಷಕರು ದೀಕ್ಷಾ ಆಪ್‌ಗಾಗಿ ಮೊಬೈಲ್ ಬಳಕೆಯನ್ನು ಬಳಸುವ ಸಂಖ್ಯೆಯನ್ನು ಸೂಚಿಸುತ್ತಿದ್ದು, ಶಿಕ್ಷಕರು ದೀಕ್ಷಾ ಆಪ್ ಗಳನ್ನು ಬಳಸುತ್ತಿದ್ದು, ತಮ್ಮ 12 ಕೋರ್ಸ್‌ಗಳನ್ನು ಪೂರೈಸಿಕೊಳ್ಳಲು ಬಳಸುತ್ತಿರುವ ಸಂಖ್ಯೆಯನ್ನು ಸೂಚಿಸುತ್ತದೆ.

## 2. ಅಂತರ್ಜಾಲ ಸಂಪರ್ಕದ ಮಟ್ಟ:

| ಕ್ರ.ಸಂ | ತಾಲ್ಲೂಕಿನ ಹೆಸರು | ಒಟ್ಟು ಶಿಕ್ಷಕರು | ಬ್ರಾಡ್ ಬ್ಯಾಂಡ್ | ಮೊಬೈಲ್ ದಿನಕ್ಕೆ 1 ಜಿಬಿಗಿಂತ ಹೆಚ್ಚು | ಮೊಬೈಲ್ ದಿನಕ್ಕೆ 1 ಜಿಬಿಗಿಂತ ಕಡಿಮೆ | ಸ್ವಲ್ಪ ಮಾತ್ರ | ಸಂಪರ್ಕಇಲ್ಲ |
|---|---|---|---|---|---|---|---|
| 1 | ಚಿತ್ರದುರ್ಗ | 1356 | 3 | 1344 | 4 | 5 | 0 |
| 2 | ಚಳ್ಳಕೆರೆ | 1337 | 2 | 1324 | 5 | 6 | 0 |
| 3 | ಹಿರಿಯೂರು | 1050 | 2 | 1040 | 3 | 5 | 0 |
| 4 | ಹೊಸದುರ್ಗ | 980 | 1 | 970 | 5 | 4 | 0 |
| 5 | ಹೊಳಲ್ಕೆರೆ | 783 | 0 | 779 | 2 | 2 | 0 |
| 6 | ಮೊಳಕಾಲ್ಮೂರು | 491 | 0 | 487 | 3 | 1 | 0 |




ಮೇಲ್ಕಂಡ ಕೋಷ್ಟಕವು ದೀಕ್ಷಾ ಆಪನ್ನು ಬಳಸುವ ಶಿಕ್ಷಕರು ಬ್ರಾಡ್ ಬ್ಯಾಂಡ್ ಹಾಗೂ 4ಜಿ ಮೊಬೈಲನ್ನು ಬಳಸಿಕೊಂಡು ಕೋರ್ಸ್‌ಗಳನ್ನು ವೀಕ್ಷಿಸಿರುವ ಮಾಹಿತಿಯನ್ನು ಸೂಚಿಸುತ್ತದೆ.


## 3. ಡಿಜಿಟಲ್ ಕೌಶಲಗಳು ಮತ್ತು ಸಾಮರ್ಥ್ಯ ಬಳಸುವ ವಿಶ್ವಾಸದ ಮಟ್ಟ

**ಈ ಮಾಹಿತಿಯು ತಾಲ್ಲೂಕುವಾರು ದೀಕ್ಷಾ ಆಪ್ ಬಳಕೆಯ ನೋಡಲ್ ಅಧಿಕಾರಿಗಳು ನೀಡಿರುತ್ತಾರೆ.**

| ಡಿಜಿಟಲ್ ಕೌಶಲಗಳು ಮತ್ತು ಸಾಮರ್ಥ್ಯ ಬಳಸುವ ವಿಶ್ವಾಸದ ಮಟ್ಟ | | | | | |
|---|---|---|---|---|---|
| ಮೈಕ್ರೋಸಾಫ್ಟ್ ಆಫೀಸ್ ಮತ್ತು ಅಂತಹ ಇ–ತಂತ್ರಾಂಶಗಳ ಬಳಕೆ (ಪಠ್ಯ, ಸ್ಲೈಡ್ ಶೀಟ್, ಪ್ರಸ್ತುತಿಗಳು) | ತುಂಬಾ ಕಡಿಮೆ | ಕಡಿಮೆ | ಸರಾಸರಿ | ಹೆಚ್ಚು | ಅತಿ ಹೆಚ್ಚು |
| | 498 | 617 | 4520 | 67 | 295 |
| ಗೂಗಲ್ ಫಾರ್ಮ್‌ಗಳ ಬಳಕೆ | ತುಂಬಾ ಕಡಿಮೆ | ಕಡಿಮೆ | ಸರಾಸರಿ | ಹೆಚ್ಚು | ಅತಿ ಹೆಚ್ಚು |
| | 2520 | 628 | 1252 | 1570 | 27 |
| ವೀಡಿಯೋ ಸಭೆಗಳ ಬಳಕೆ (ಗೂಗಲ್ ಮೀಟ್, ವೆಬೆಕ್ಸ್, ಜೂಮ್, ಇತ್ಯಾದಿ) | ತುಂಬಾ ಕಡಿಮೆ | ಕಡಿಮೆ | ಸರಾಸರಿ | ಹೆಚ್ಚು | ಅತಿ ಹೆಚ್ಚು |
| | 246 | 547 | 3846 | 143 | 1215 |
| ಅಂತರ್ಜಾಲದಿಂದ ಮಾಹಿತಿಗಾಗಿ ಶೋಧ ತಂತ್ರಾಂಶದ (ಬ್ರೌಸರ್) ಬಳಕೆ) | ತುಂಬಾ ಕಡಿಮೆ | ಕಡಿಮೆ | ಸರಾಸರಿ | ಹೆಚ್ಚು | ಅತಿ ಹೆಚ್ಚು |
| | 329 | 566 | 4778 | 279 | 45 |
| ಶೈಕ್ಷಣಿಕ ತಂತ್ರಜ್ಞಾನ ಮತ್ತು ಸಂವಹನ ಸಾಧನಗಳನ್ನು ಬೋಧನೆಗೆ ಬಳಸುವುದು (ಜಿಯೋಜೀಬ್ರಾ, ಕಹೂತ್, ಪ್ಯಾಡ್ಲೆಟ್, ಫೆಟ್) | ತುಂಬಾ ಕಡಿಮೆ | ಕಡಿಮೆ | ಸರಾಸರಿ | ಹೆಚ್ಚು | ಅತಿ ಹೆಚ್ಚು |
| | 539 | 2140 | 2012 | 977 | 329 |

1. ಮೈಕ್ರೋಸಾಫ್ಟ್ ಆಫೀಸ್ ಮತ್ತು ಅಂತಹ ಇ–ತಂತ್ರಾಂಶಗಳ ಬಳಕೆ (ಪಠ್ಯ, ಸ್ಲೈಡ್ ಶೀಟ್, ಪ್ರಸ್ತುತಿಗಳು)


| ಮೈಕ್ರೋಸಾಫ್ಟ್ ಆಫೀಸ್ ಮತ್ತು ಅಂತಹ ಇ–ತಂತ್ರಾಂಶಗಳ ಬಳಕೆ (ಪಠ್ಯ, ಸ್ಲೈಡ್ ಶೀಟ್, ಪ್ರಸ್ತುತಿಗಳು) | ತುಂಬಾ ಕಡಿಮೆ | ಕಡಿಮೆ | ಸರಾಸರಿ | ಹೆಚ್ಚು | ಅತಿ ಹೆಚ್ಚು |
|---|---|---|---|---|---|
| | 498 | 617 | 4520 | 67 | 295 |




ಮೈಕ್ರೋಸಾಫ್ಟ್ ಆಫೀಸ್ ಮತ್ತು ಅಂತಹ ಇ–ತಂತ್ರಾಂಶಗಳ ಬಳಕೆ (ಪಠ್ಯ, ಸ್ಲೈಡ್ ಶೀಟ್, ಪ್ರಸ್ತುತಿಗಳು)ಯನ್ನು ಶಿಕ್ಷಕರು ನಿರ್ವಹಿಸಿರುವುದನ್ನು ಕೋಷ್ಟಕವು ಸೂಚಿಸುತ್ತದೆ.


## 2. ಗೂಗಲ್ ಫಾರ್ಮ್‌ಗಳ ಬಳಕೆ

| | ತುಂಬಾ ಕಡಿಮೆ | ಕಡಿಮೆ | ಸರಾಸರಿ | ಹೆಚ್ಚು | ಅತಿ ಹೆಚ್ಚು |
|---|---|---|---|---|---|
| ಗೂಗಲ್ ಫಾರ್ಮ್‌ಗಳ ಬಳಕೆ | 2520 | 628 | 1252 | 1570 | 27 |




## 3. ವೀಡಿಯೋ ಸಭೆಗಳ ಬಳಕೆ (ಗೂಗಲ್ ಮೀಟ್, ವೆಬೆಕ್ಸ್, ಜೂಮ್, ಇತ್ಯಾದಿ)


| | ತುಂಬಾ ಕಡಿಮೆ | ಕಡಿಮೆ | ಸರಾಸರಿ | ಹೆಚ್ಚು | ಅತಿ ಹೆಚ್ಚು |
|---|---|---|---|---|---|
| ವೀಡಿಯೋ ಸಭೆಗಳ ಬಳಕೆ (ಗೂಗಲ್ ಮೀಟ್, ವೆಬೆಕ್ಸ್, ಜೂಮ್, ಇತ್ಯಾದಿ) | 246 | 547 | 3846 | 143 | 1215 |




ವೀಡಿಯೋ ಸಭೆಗಳ ಬಳಕೆ (ಗೂಗಲ್ ಮೀಟ್, ವೆಬೆಕ್ಸ್, ಜೂಮ್, ಇತ್ಯಾದಿ)ಯನ್ನು ಮಾಡಿರುವುದು ಸೂಚಿಸುತ್ತದೆ.

## 4. ಅಂತರ್ಜಾಲದಿಂದ ಮಾಹಿತಿಗಾಗಿ ಶೋಧ ತಂತ್ರಾಂಶದ (ಬ್ರೌಸರ್) ಬಳಕೆ)


| ಅಂತರ್ಜಾಲದಿಂದ ಮಾಹಿತಿಗಾಗಿ ಶೋಧ ತಂತ್ರಾಂಶದ (ಬ್ರೌಸರ್) ಬಳಕೆ) | ತುಂಬಾ ಕಡಿಮೆ | ಕಡಿಮೆ | ಸರಾಸರಿ | ಹೆಚ್ಚು | ಅತಿ ಹೆಚ್ಚು |
|---|---|---|---|---|---|
| | 329 | 566 | 4778 | 279 | 45 |




ಅಂತರ್ಜಾಲದಿಂದ ಮಾಹಿತಿಗಾಗಿ ಶೋಧ ತಂತ್ರಾಂಶದ (ಬ್ರೌಸರ್) ಬಳಕೆ) ಬಗ್ಗೆ ಮಾಹಿತಿಯನ್ನು ಸೂಚಿಸುತ್ತದೆ.

## 5. ಶೈಕ್ಷಣಿಕ ತಂತ್ರಜ್ಞಾನ ಮತ್ತು ಸಂವಹನ ಸಾಧನಗಳನ್ನು ಬೋಧನೆಗೆ ಬಳಸುವುದು (ಜಿಯೋಜೀಬ್ರಾ, ಕಹೂತ್, ಪ್ಯಾಡ್ಲೆಟ್, ಫೆಟ್)

| ಶೈಕ್ಷಣಿಕ ತಂತ್ರಜ್ಞಾನ ಮತ್ತು ಸಂವಹನ ಸಾಧನಗಳನ್ನು ಬೋಧನೆಗೆ ಬಳಸುವುದು (ಜಿಯೋಜೀಬ್ರಾ, ಕಹೂತ್, ಪ್ಯಾಡ್ಲೆಟ್, ಫೆಟ್) | ತುಂಬಾ ಕಡಿಮೆ | ಕಡಿಮೆ | ಸರಾಸರಿ | ಹೆಚ್ಚು | ಅತಿ ಹೆಚ್ಚು |
|---|---|---|---|---|---|
| | 539 | 2140 | 2012 | 977 | 329 |





ಶೈಕ್ಷಣಿಕ ತಂತ್ರಜ್ಞಾನ ಮತ್ತು ಸಂವಹನ ಸಾಧನಗಳನ್ನು ಬೋಧನೆಗೆ ಬಳಸುವುದು (ಜಿಯೋಜೀಬ್ರಾ, ಕಹೂತ್, ಪ್ಯಾಡ್ಲೆಟ್, ಫೆಟ್) ಹಾಗೂ ಶಿಕ್ಷಕರು ದೀಕ್ಷಾ ಆಪನ್ನು ಬಳಸಿರುವುದನ್ನು ಸೂಚಿಸುತ್ತದೆ.

## 4. ಸಾಂಕ್ರಾಮಿಕ ಸಮಯದಲ್ಲಿ ದೀಕ್ಷಾ ಆಪ್ ಬಳಸುವಾಗ ಶಿಕ್ಷಕರು ಎದುರಿಸಿದ ಮುಖ್ಯ ಸಮಸ್ಯೆಗಳು

| | | | | |
|---|---|---|---|---|
| ದೀಕ್ಷಾ ಆಪ್ ಬಳಕೆಯ ಸಾಧನಗಳ ಲಭ್ಯತೆ | ಇಲ್ಲ/ಕನಿಷ್ಟ | ಅಪರೂಪವಾಗಿ | ಆಗಾಗ್ಗೆ | ಅನೇಕ ಬಾರಿ |
| | 341 | 562 | 681 | 4413 |
| ಉತ್ತಮ ಅಂತರ್ಜಾಲ ಸಂಪರ್ಕದ ಲಭ್ಯತೆ | ಇಲ್ಲ/ಕನಿಷ್ಟ | ಅಪರೂಪವಾಗಿ | ಆಗಾಗ್ಗೆ | ಅನೇಕ ಬಾರಿ |
| | 325 | 556 | 636 | 4480 |
| ದೀಕ್ಷಾ ಕೋರ್ಸ್‌ಗಳನ್ನು ಬಳಸಲು ಸಾಧನಗಳನ್ನು ಚೆನ್ನಾಗಿ ಬಳಸುವ ಸಾಮರ್ಥ್ಯ | ಇಲ್ಲ/ಕನಿಷ್ಟ | ಅಪರೂಪವಾಗಿ | ಆಗಾಗ್ಗೆ | ಅನೇಕ ಬಾರಿ |
| | 232 | 529 | 727 | 4509 |
| ಆನ್ ಲೈನ್ ಬೋಧನೆಯ ಪರಿಕರ/ತಂತ್ರಾಂಶಗಳನ್ನು ಬಳಸುವ ಸಾಮರ್ಥ್ಯ ತಯಾರಿಗೆ ಸಮಯದ ಲಭ್ಯತೆ | ಇಲ್ಲ/ಕನಿಷ್ಟ | ಅಪರೂಪವಾಗಿ | ಆಗಾಗ್ಗೆ | ಅನೇಕ ಬಾರಿ |
| | 281 | 536 | 714 | 4466 |
| ದೀಕ್ಷಾ ಆಪ್ ಬಳಕೆಗೆ ವೇಳಾಪಟ್ಟಿಯ ನಿರ್ಬಂಧಗಳು | ಇಲ್ಲ/ಕನಿಷ್ಟ | ಅಪರೂಪವಾಗಿ | ಆಗಾಗ್ಗೆ | ಅನೇಕ ಬಾರಿ |
| | 354 | 547 | 705 | 4391 |
| ದೀಕ್ಷಾ ಕೋರ್ಸ್‌ಗಳ ಕುರಿತು ಕನ್ನಡದಲ್ಲಿ ಸೂಕ್ತವಾದ ಇ–ಸಂಪನ್ಮೂಲಗಳ ಲಬ್ಯತೆ | ಇಲ್ಲ/ಕನಿಷ್ಟ | ಅಪರೂಪವಾಗಿ | ಆಗಾಗ್ಗೆ | ಅನೇಕ ಬಾರಿ |
| | 389 | 985 | 253 | 4370 |

### 1) ದೀಕ್ಷಾ ಆಪ್ ಬಳಕೆಯ ಸಾಧನಗಳ ಲಭ್ಯತೆ


| | | | | |
|---|---|---|---|---|
| ದೀಕ್ಷಾ ಆಪ್ ಬಳಕೆಯ ಸಾಧನಗಳ ಲಭ್ಯತೆ | ಇಲ್ಲ/ಕನಿಷ್ಟ | ಅಪರೂಪವಾಗಿ | ಆಗಾಗ್ಗೆ | ಅನೇಕ ಬಾರಿ |
| | 341 | 562 | 681 | 4413 |




ದೀಕ್ಷಾ ಆಪ್ ಬಳಕೆಯ ಸಾಧನಗಳ ಲಭ್ಯತೆಯನ್ನು ಮೇಲ್ಕಂಡ ಕೋಷ್ಟಕವು ಸೂಚಿಸುತ್ತದೆ.

## 2) ಉತ್ತಮ ಅಂತರ್ಜಾಲ ಸಂಪರ್ಕದ ಲಭ್ಯತೆ


| | ಇಲ್ಲ/ಕನಿಷ್ಠ | ಅಪರೂಪವಾಗಿ | ಆಗಾಗ್ಗೆ | ಅನೇಕ ಬಾರಿ |
|---|---|---|---|---|
| ಉತ್ತಮ ಅಂತರ್ಜಾಲ ಸಂಪರ್ಕದ ಲಭ್ಯತೆ | 325 | 556 | 636 | 4480 |




ಉತ್ತಮ ಅಂತರ್ಜಾಲ ಸಂಪರ್ಕದ ಲಭ್ಯತೆಯನ್ನು ಮೇಲ್ಕಂಡ ಕೋಷ್ಟಕವು ಸೂಚಿಸುತ್ತದೆ.

## 3) ದೀಕ್ಷಾ ಕೋರ್ಸ್‌ಗಳನ್ನು ಬಳಸಲು ಸಾಧನಗಳನ್ನು ಚೆನ್ನಾಗಿ ಬಳಸುವ ಸಾಮರ್ಥ್ಯ


| | ಇಲ್ಲ/ಕನಿಷ್ಠ | ಅಪರೂಪವಾಗಿ | ಆಗಾಗ್ಗೆ | ಅನೇಕ ಬಾರಿ |
|---|---|---|---|---|
| ದೀಕ್ಷಾ ಕೋರ್ಸ್‌ಗಳನ್ನು ಬಳಸಲು ಸಾಧನಗಳನ್ನು ಚೆನ್ನಾಗಿ ಬಳಸುವ ಸಾಮರ್ಥ್ಯ | 232 | 529 | 727 | 4509 |




ದೀಕ್ಷಾ ಕೋರ್ಸ್‌ಗಳನ್ನು ಬಳಸಲು ಸಾಧನಗಳನ್ನು ಚೆನ್ನಾಗಿ ಬಳಸುವ ಸಾಮರ್ಥ್ಯವನ್ನು ಮೇಲ್ಕಂಡ ಕೋಷ್ಟಕವು ಸೂಚಿಸುತ್ತದೆ.

4) ಆನ್ ಲೈನ್ ಬೋಧನೆಯ ಪರಿಕರ/ತಂತ್ರಾಂಶಗಳನ್ನು ಬಳಸುವ ಸಾಮರ್ಥ್ಯ ತಯಾರಿಗೆ ಸಮಯದ ಲಭ್ಯತೆ


| | ಇಲ್ಲ/ಕನಿಷ್ಟ | ಅಪರೂಪವಾಗಿ | ಆಗಾಗ್ಗೆ | ಅನೇಕ ಬಾರಿ |
|---|---|---|---|---|
| ಆನ್ ಲೈನ್ ಬೋಧನೆಯ ಪರಿಕರ/ತಂತ್ರಾಂಶಗಳನ್ನು ಬಳಸುವ ಸಾಮರ್ಥ್ಯ ತಯಾರಿಗೆ ಸಮಯದ ಲಭ್ಯತೆ | 281 | 536 | 714 | 4466 |




ಆನ್ ಲೈನ್ ಬೋಧನೆಯ ಪರಿಕರ/ತಂತ್ರಾಂಶಗಳನ್ನು ಬಳಸುವ ಸಾಮರ್ಥ್ಯ ತಯಾರಿಗೆ ಸಮಯದ ಲಭ್ಯತೆಯನ್ನು ಮೇಲ್ಕಂಡ ಕೋಷ್ಟಕವು ಸೂಚಿಸುತ್ತದೆ.

5) ದೀಕ್ಷಾ ಆಪ್ ಬಳಕೆಗೆ ವೇಳಾಪಟ್ಟಿಯ ನಿರ್ಬಂಧಗಳು


| | ಇಲ್ಲ/ಕನಿಷ್ಟ | ಅಪರೂಪವಾಗಿ | ಆಗಾಗ್ಗೆ | ಅನೇಕ ಬಾರಿ |
|---|---|---|---|---|
| ದೀಕ್ಷಾ ಆಪ್ ಬಳಕೆಗೆ ವೇಳಾಪಟ್ಟಿಯ ನಿರ್ಬಂಧಗಳು | 354 | 547 | 705 | 4391 |




ದೀಕ್ಷಾ ಆಪ್ ಬಳಕೆಗೆ ವೇಳಾಪಟ್ಟಿಯ ನಿರ್ಬಂಧಗಳನ್ನು ಮೇಲ್ಕಂಡ ಕೋಷ್ಟಕವು ಸೂಚಿಸುತ್ತದೆ.

## 6) ದೀಕ್ಷಾ ಕೋರ್ಸ್‌ಗಳ ಕುರಿತು ಕನ್ನಡದಲ್ಲಿ ಸೂಕ್ತವಾದ ಇ–ಸಂಪನ್ಮೂಲಗಳ ಲಭ್ಯತೆ

| | ಇಲ್ಲ/ಕನಿಷ್ಟ | ಅಪರೂಪವಾಗಿ | ಆಗಾಗ್ಗೆ | ಅನೇಕ ಬಾರಿ |
|---|---|---|---|---|
| ದೀಕ್ಷಾ ಕೋರ್ಸ್‌ಗಳ ಕುರಿತು ಕನ್ನಡದಲ್ಲಿ ಸೂಕ್ತವಾದ ಇ–ಸಂಪನ್ಮೂಲಗಳ ಲಭ್ಯತೆ | 389 | 985 | 253 | 4370 |




ದೀಕ್ಷಾ ಕೋರ್ಸ್‌ಗಳ ಕುರಿತು ಕನ್ನಡದಲ್ಲಿ ಸೂಕ್ತವಾದ ಇ–ಸಂಪನ್ಮೂಲಗಳ ಲಭ್ಯತೆಯನ್ನು ಮೇಲ್ಕಂಡ ಕೋಷ್ಟಕವು ಸೂಚಿಸುತ್ತಿದ್ದು, ಕನ್ನಡದಲ್ಲಿ ಇ–ಸಂಪನ್ಮೂಲಗಳನ್ನು ತಿಳಿಸುತ್ತದೆ.

:: ದೀಕ್ಷಾ ಆಪ್ ಬಳಕೆಯನ್ನು ಶಿಕ್ಷಕರು ನಿರ್ವಹಿಸಿದ ಬಗ್ಗೆ ಕಂಡುಕೊಂಡ ಅಂಶಗಳು ::

1. ದೀಕ್ಷಾ ಆಪ್ ಬಳಕೆಯನ್ನು ಶಿಕ್ಷಕರು ಕೆಲವು ಸಮಸ್ಯೆಗಳನ್ನು ಹೊಂದಿದಾಗ್ಯೂ ನಿರ್ವಹಿಸಿರುವುದು ಕ್ರಮಬದ್ಧವಾಗಿದೆ.
2. ಆಂಡ್ರಾಯ್ಡ್ ಮೊಬೈಲನ್ನು ಬಳಸಲು ಬರದಿರುವ ಶಿಕ್ಷಕರೂ ಸಹ ಆಂಡ್ರಾಯ್ಡ್ ಮೊಬೈಲನ್ನು ಬಳಸಿ ಕೋರ್ಸ್‌ಗಳನ್ನು ಪೂರ್ಣಗೊಳಿಸಿರುವುದು ಕಂಡುಬಂದಿದೆ.
3. ಜಿಲ್ಲೆಯ ಎಲ್ಲಾ ಶಿಕ್ಷಕರು 12 ಕೋರ್ಸ್‌ಗಳನ್ನು ಪೂರ್ಣಗೊಳಿಸಿರುವುದು ಕಂಡುಬಂದಿದೆ.
4. ಕೆಲವು ಶಿಕ್ಷಕರು ದೀಕ್ಷಾ ಬಳಕೆಯನ್ನು ಅತಿಹೆಚ್ಚು ಬಳಸಿ ಕೋರ್ಸುಗಳನ್ನು ಪುನರ್ ಮನನ ಮಾಡಿಕೊಂಡಿರುವುದು ಕಂಡುಬಂದಿದೆ.

## 5. ಆನ್ ಲೈನ್ ಮೂಲಕ 02-ಬಿ.ಆರ್.ಪಿ./04-ಸಿ.ಆರ್.ಪಿ./04-ಶಿಕ್ಷಕರಿಗೆ ಕೇಳಿದ ಪ್ರಶ್ನೆಗಳಿಗೆ ನೀಡಿರುವ ಉತ್ತರಗಳನ್ನು ಕೆಳಕಂಡಂತೆ ಕೋಷ್ಟಕದಲ್ಲಿ ನಿರ್ವಹಿಸಲಾಗಿದೆ.

| ಕ್ರ.ಸಂ | ದೀಕ್ಷಾ ಆಪ್ ಕುರಿತ ಪ್ರಶ್ನೆಗಳು (02-ಬಿ,ಆರ್,ಪಿ-04-ಸಿ.ಆರ್.ಪಿ.-04-ಶಿಕ್ಷಕರು) | ನೀಡಿದ ಉತ್ತರಗಳು | | | ಒಟ್ಟು ಶೇಕಡಾ | | |
|---|---|---|---|---|---|---|---|
| | | ಸರಿ | ಅಸಮಂಜಸ | ಸಂದಿಗ್ಧ | ಸರಿ | ಅಸಮಂಜಸ | ಸಂದಿಗ್ಧ |
| 1 | ದೀಕ್ಷಾದ ವಿಸ್ತೃತ ರೂಪ | 7 | 2 | 1 | 70 | 20 | 10 |
| 2 | ದೀಕ್ಷಾ ಪೋರ್ಟಲ್ ಯಾರ ಪ್ರಯೋಜಕತ್ವ ಹೊಂದಿದೆ? | 6 | 4 | 0 | 60 | 40 | 0 |
| 3 | ದೀಕ್ಷಾ ಕಾರ್ಯಕ್ರಮಗಳಿಗೆ ಯಾವ ತರಹದ ಮೊಬೈಲ್ ಬಳಸಬೇಕು? | 9 | 1 | 0 | 90 | 10 | 0 |
| 4 | ದೀಕ್ಷಾ ಆಪ್‌ನ ವೆಬ್ ಸೈಟ್ ಯಾವುದು? | 8 | 2 | 0 | 80 | 20 | 0 |
| 5 | ದೀಕ್ಷಾ ಆಪ್ ಡೌನ್ ಲೋಡ್ ಮಾಡಿಕೊಳ್ಳಲು ಮೊಬೈಲ್‌ನಲ್ಲಿ ಯಾವ ಆಪ್ ಬಳಸಬೇಕು? | 6 | 4 | 0 | 60 | 40 | 0 |
| 6 | ಪ್ಲೇಸ್ಟೋರ್‌ನಿಂದ ಡೌನ್‌ಲೋಡ್ ಆದ ನಂತರದಲ್ಲಿ ತಮ್ಮ ಯಾವ ನಂಬರನ್ನು ಕೇಳುತ್ತದೆ? | 9 | 1 | 0 | 90 | 10 | 0 |
| 7 | ಪಾಸ್‌ವರ್ಡ್ ಬಳಸುವಾಗ ಯಾವ ರೀತಿಯ ಕ್ರಮವನ್ನು ನಿರ್ವಹಿಸಿರುವಿರಿ? | 8 | 2 | 0 | 80 | 20 | 0 |
| 8 | ಪಾಸ್‌ವರ್ಡ್ ಸರಿ ಎಂದು ಬಂದಮೇಲೆ ತಮ್ಮ ಭಾವಚಿತ್ರದ ಮೇಲೆ ಯಾವ ಚಿಹ್ನೆ ಹಾಗೂ ಬಣ್ಣ ಬರುತ್ತದೆ? | 8 | 2 | 0 | 80 | 20 | 0 |
| 9 | ಒಂದುವೇಳೆ ತಮ್ಮ ವೆಬ್‌ಪೇಜ್ ತೆರೆಯಲಿಲ್ಲವೆಂದರೆ, ಯಾರ ಸಹಾಯ ಪಡೆದು ನಿರ್ವಹಿಸಿದ್ದೀರಿ? | 7 | 3 | 0 | 70 | 30 | 0 |
| 10 | ಒಂದುವೇಳೆ ತಮ್ಮ ವೆಬ್‌ಪೇಜ್ ತೆರೆಯಲಿಲ್ಲವೆಂದರೆ, ಮೊದಲು ಯಾರಿಗೆ ವಿಷಯವನ್ನು ತಲುಪಿಸಿದ್ದೀರಿ? | 8 | 2 | 0 | 80 | 20 | 0 |
| 11 | ನಿಮ್ಮ ವೆಬ್ ಪೇಜ್ ತೆರೆದಮೇಲೆ ಯಾವ ರೀತಿಯ ಪುಟ ಪ್ರಾರಂಭವಾಗುತ್ತದೆ? | 8 | 2 | 0 | 80 | 20 | 0 |
| 12 | ಕೋರ್ಸ್‌ಗಳಿಗೆ ಪ್ರವೇಶಿಸಲು ಯಾವ ರೀತಿಯ ಕ್ರಮವನ್ನು ವಹಿಸಿದ್ದಿರಿ? | 7 | 3 | 0 | 70 | 30 | 0 |
| 13 | ನಿಮಗೆ ಎಷ್ಟು ಜನರಿಕ್ ಕೋರ್ಸ್‌ಗಳನ್ನು ನಿರ್ವಹಿಸಬೇಕು ಎಂದು ಅಧಿಕಾರಿಗಳು ತಿಳಿಸಿದ್ದಾರೆ? | 6 | 4 | 0 | 60 | 40 | 0 |
| 14 | ನಿಮಗೆ ಎಷ್ಟು ವಿಷಯವಾರು ಬೋಧನಾ ಕೋರ್ಸ್‌ಗಳನ್ನು ನಿರ್ವಹಿಸಬೇಕು ಎಂದು ಅಧಿಕಾರಿಗಳು ತಿಳಿಸಿದ್ದಾರೆ? | 6 | 4 | 0 | 60 | 40 | 0 |
| 15 | ಒಂದು ತಿಂಗಳಿಗೆ ಎಷ್ಟು ಕೋರ್ಸ್‌ಗಳನ್ನು ಮುಕ್ತಾಯಗೊಳಿಸಬೇಕು? ಎಂದು ನಿಮ್ಮ ಅಧಿಕಾರಿಗಳು ತಿಳಿಸಿದ್ದಾರೆ? | 9 | 1 | 0 | 90 | 10 | 0 |

| | | | | | | | |
|---|---|---|---|---|---|---|---|
| 16 | ಒಂದು ವೇಳೆ ಆಯಾ ತಿಂಗಳಲ್ಲಿ ಕೋರ್ಸ್‌ಗಳನ್ನು ಮುಕ್ತಾಯಗೊಳಿಸಿಲ್ಲವೆಂದರೆ ಯಾವಾಗ ಮುಕ್ತಾಯಗೊಳಿಸಿಕೊಳ್ಳಬಹುದು ಎಂದು ನಿಮ್ಮ ಅಧಿಕಾರಿಗಳು ತಿಳಿಸಿದ್ದಾರೆ? | 6 | 2 | 2 | 60 | 20 | 20 |
| 17 | ನೀವು ಕೋರ್ಸ್‌ಗಳನ್ನು ಪ್ರವೇಶಿಸಿದಾಗ ಅದರಲ್ಲಿನ ಆಡಿಯೋ/ವೀಡಿಯೋಗಳ ಬಗ್ಗೆ ನಿಮ್ಮ ಅಭಿಪ್ರಾಯ (ಉತ್ತಮ, ಸಾಧಾರಣ, ಸರಿಯಿಲ್ಲ) | 9 | 1 | 0 | 90 | 10 | 0 |
| 18 | ಕೋರ್ಸ್‌ಗಳಲ್ಲಿನ ವಿಷಯಾಂಶಗಳು ನಿಮ್ಮ ತರಗತಿ/ಬೊಧನಾ ಸಮಯಕ್ಕೆ ಸಂಬಂಧಿಸಿವೆಯೇ? | 9 | 1 | 0 | 90 | 10 | 0 |
| 19 | ಕೋರ್ಸ್‌ಗಳಲ್ಲಿನ ಪಠ್ಯಾಂಶಗಳು ನಿಮ್ಮ ಜೀವನಕ್ಕೆ/ಅನುಭವಕ್ಕೆ ಪೂರಕವಾಗಿವೆಯೇ? | 8 | 2 | 0 | 80 | 20 | 0 |
| 20 | ಐಸಿಟಿ ನಿರ್ವಹಣೆ ಮಾಡುವುದು ಹಾಗು ಬಳಸುವುದು ನಿಮಗೆ ಕಷ್ಟವೆನಿಸುತ್ತದೆಯೇ? | 8 | 2 | 0 | 80 | 20 | 0 |
| 21 | ಕೋರ್ಸ್‌ಗಳು ಮುಗಿದ ನಂತರ ಎಷ್ಟು ದಿನಗಳಲ್ಲಿ ನಿಮಗೆ ಪ್ರಮಾಣಪತ್ರ ದೊರೆಯುತ್ತದೆ? | 7 | 3 | 0 | 70 | 30 | 0 |
| 22 | ಪ್ರಮಾಣಪತ್ರಗಳನ್ನು ಪಡೆದುಕೊಂಡ ನಂತರ ಅವುಗಳನ್ನು ಏನೇನು ಮಾಡಬೇಕೆಂದು ಅಧಿಕಾರಿಗಳು ತಿಳಿಸಿದ್ದಾರೆ? | 6 | 4 | 0 | 60 | 40 | 0 |
| 23 | ಕೋರ್ಸ್‌ಗಳನ್ನು ವೀಕ್ಷಿಸದ ನಂತರ ಅವುಗಳಲ್ಲಿನ ಚಟುವಟಿಕೆಗಳನ್ನು ಹಾಗು ಕಾರ್ಯತಂತ್ರಗಳನ್ನು ತಮ್ಮ ಶಾಲಾ ಬೋಧನಾ ಅವಧಿಯಲ್ಲಿ ಉಪಯೋಗಿಸಿರುವುದು. | 10 | 0 | 0 | 100 | 0 | 0 |
| 24 | ದೀಕ್ಷಾ ಪೋರ್ಟಲ್‌ನಲ್ಲಿನ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ನಂತರ ಅವುಗಳಲ್ಲಿನ ವೀಡಿಯೋ/ಚಟುವಟಿಕೆಗಳನ್ನು ಡೌನ್ ಲೋಡ್ ಮಾಡಿಕೊಂಡು ಮನದಟ್ಟಾಗುವವರೆಗೆ ವೀಕ್ಷಿಸಿರುವುದು | 1 | 8 | 1 | 10 | 80 | 10 |
| 25 | ಎಲ್ಲಾ ಕೋರ್ಸ್‌ಗಳನ್ನು ಪೂರ್ಣಗೊಳಿಸಿದ ನಂತರದಲ್ಲಿ, ದೀಕ್ಷಾ ಪೋರ್ಟಲನ್ನು ಬಳಸುತ್ತಿರುವುದು. | 2 | 8 | 0 | 20 | 80 | 0 |

ಆನ್ ಲೈನ್‌ನಲ್ಲಿ ಬಿ.ಆರ್.ಪಿ./ಸಿಆರ್‌ಪಿ./ಶಿಕ್ಷಕರಿಗೆ ಕೇಳಿದ ಪ್ರಶ್ನೆಗಳಿಗೆ ಮೇಲ್ಕಂಡಂತೆ ಉತ್ತರಗಳನ್ನು ನೀಡಿರುತ್ತಾರೆ. ಆದಾಗ್ಯೂ ಕೆಳಕಂಡ ಅಂಶಗಳು, ದೀಕ್ಷಾ ಆಪನ್ನು ಇನ್ನು ಹೆಚ್ಚಿನ ರೀತಿಯಲ್ಲಿ ಬಳಸಿದಲ್ಲಿ ಉಪಯೋಗವಾಗಬಹುದು,

1. ದೀಕ್ಷಾ ಆಪನ್ನು 4ಜಿ ಸೆಟ್‌ಗಳಲ್ಲಿ ಬಳಸುವುದು.
2. 12 ಕೋರ್ಸ್‌ಗಳನ್ನು ವೀಕ್ಷಿಸಿ ಅದರಲ್ಲಿನ ಪ್ರಮುಖಾಂಶಗಳನ್ನು ಬಳಕೆ ಮಾಡಿಕೊಂಡು, ನಿತ್ಯ ಬೋಧನೆಯಲ್ಲಿ ಅಳವಡಿಸಿಕೊಳ್ಳುವುದು.
3. ಮೇಲುಸ್ತುವಾರಿ ಅಧಿಕಾರಿಗಳು ದೀಕ್ಷಾ ಆಪನ್ನು ಬಳಸುವ ಹಾಗೂ ಅದರಿಂದ ಶಿಕ್ಷಕರಿಗೆ ಆಗುವ ಪ್ರಯೋಜನಗಳನ್ನು ತಿಳಿಸಿದಲ್ಲಿ ಶಿಕ್ಷಕರಿಗೆ ಉಪಯೋಗವಾಗುವುದು.
4. ದೀಕ್ಷಾದಲ್ಲಿನ ವೀಡಿಯೋಗಳನ್ನು ಕ್ರಮಬದ್ಧವಾಗಿ ವೀಕ್ಷಿಸಿ, ಬೋಧನೆ ಸಮಯದಲ್ಲಿ ಬಳಕೆ ಮಾಡಿಕೊಳ್ಳುವುದು.

## ದೀಕ್ಷಾ ಆಪ್ ಬಳಕೆಯ ಹಾಗು ಉಪಯೋಗದ ಪರಿಮಾಣಾತ್ಮಕತೆ ಕುರಿತು ಅಧ್ಯಯನದಿಂದ ಕಂಡುಕೊಂಡ ಅಂಶಗಳು

ಮೇಲ್ಕಂಡ ಎಲ್ಲಾ ಅಧ್ಯಾಯಗಳಿಗೆ ದಿನಾಂಕ : 05.04.2021 ರಂದು ದೀಕ್ಷಾ ಆಪ್ ಬಳಕೆ ಹಾಗು ನಂತರದ ಚಟುವಟಿಕೆಗಳ ಅಳವಡಿಕೆಗಳ ಕುರಿತು ಸಂಪನ್ಮೂಲ ವ್ಯಕ್ತಿಗಳು ಹಾಗೂ ಶಿಕ್ಷಕರನ್ನು ಡಯಟ್, ಚಿತ್ರದುರ್ಗಕ್ಕೆ ಆಹ್ವಾನಿಸಿ, ಕೂಲಂಕುಷವಾಗಿ ಚರ್ಚಿಸಿ, ದೀಕ್ಷಾ ಆಪ್ ಬಳಕೆಗೆ ಸಂಬಂಧಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಕೆಳಕಂಡ ಧನಾತ್ಮಕ ಹಾಗೂ ಋಣಾತ್ಮಕ ಅಂಶಗಳನ್ನು ಪಡೆದುಕೊಂಡು ಅಂತಿಮ ನಿರ್ಣಯಕ್ಕೆ ಬರಲಾಯಿತು.

# ದೀಕ್ಷಾ ಆಪ್ ಬಳಕೆ ಹಾಗು ಉಪಯೋಗದ ಪರಿಮಾಣಾತ್ಮಕತೆ ಕುರಿತು ಅಧ್ಯಯನದಿಂದ ಕಂಡುಕೊಂಡ

## ಧನಾತ್ಮಕ ಅಂಶಗಳು

1. ದೀಕ್ಷಾ ಆಪ್‌ನಲ್ಲಿ ಶಿಕ್ಷಕರಿಗೆ ಅಳವಡಿಸಿರುವ ಮಾಡ್ಯೂಲ್‌ಗಳು ಶಿಕ್ಷಕರ ಸೇವಾ ತರಬೇತಿಗೆ ಸಂಬಂಧಿಸಿದಂತೆ ಅಗತ್ಯವಾದ ಮಾಹಿತಿಗಳನ್ನು ಹೊಂದಿದ್ದು, ಪೂರಕವಾಗಿವೆ.
2. ಮಾಡ್ಯೂಲ್‌ಗಳಲ್ಲಿನ ಉಪಘಟಕಾಂಶಗಳು ಬಹುತೇಕ ಓದುವುದು ಹಾಗೂ ಅನ್ವಯಿಕ ರೂಪದಲ್ಲಿ ಕಂಡುಬಂದಿವೆ.
3. ಪ್ರತಿ ಅಧ್ಯಾಯದಲ್ಲಿ ಅಳವಡಿಸಿಕೊಂಡಿರುವ ಚಟುವಟಿಕೆಗಳು ಶಿಕ್ಷಕರು ಕುತೂಹಲಭರಿವಾಗಿ ಹಾಗೂ ಪರಿಶೋಧಿಸುವ ಮೂಲಕ ಕಲಿಯುವ ವಿಧಾನದಲ್ಲಿವೆ.
4. ಪ್ರತಿ ಅಧ್ಯಾಯಗಳಿಗೆ ನೀಡಿರುವ ಉದಾಹರಣೆಗಳ ಪ್ರತಿ ಉಪಘಟಕಕ್ಕೆ ನೀಡಿರುವ ಉಪಘಟಕಗಳು ಶಿಕ್ಷಕರು ಪ್ರಯತ್ನಿಸಿ ಉತ್ತರಿಸಬಹುದಂತಿವೆ.
5. ಪ್ರತಿ ಉಪಘಟಕಕ್ಕೆ ವಿಡಿಯೋಗಳನ್ನು ನೀಡಿದ್ದು, ಕೋರ್ಸ್‌ಗೆ ಸಂಬಂಧಿಸಿದಂತೆ ಪೂರಕವಾಗಿದ್ದು, ಚಿತ್ರೀಕರಣವು ಉತ್ತಮವಾಗಿವೆ.
6. ವೀಡಿಯೋದಲ್ಲಿನ ಮಾಹಿತಿಗಳನ್ನು ಮನನ ಮಾಡಿಕೊಳ್ಳಲು ನೀಡಿರುವ ಮುದ್ರಣ ಮಾಹಿತಿಗಳು ವಿಷಯವನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡುವಂತಿವೆ.
7. ಮಾಡ್ಯೂಲ್‌ಗಳಲ್ಲಿನ ಪ್ರಶ್ನೆಗಳು ಹಾಗೂ ಉಪಪ್ರಶ್ನೆಗಳು ಶಿಕ್ಷಕರ ಕಲಿಕೆಯನ್ನು ದೃಢೀಕರಿಸುವಂತಿದ್ದು, ಪ್ರಯತ್ನ ಮಾಡುವಂತೆ ರಚಿಸಲ್ಪಟ್ಟಿವೆ.
8. ಅಧ್ಯಾಯದ ಉಪಘಟಕಗಳ ನಂತರದಲ್ಲಿ ನೀಡಿರುವ "ಕ್ವಿಜ್" ಶಿಕ್ಷಕರ ಕಲಿಕೆಯನ್ನು ಪರಿಶೀಲಿಸುವಂತಿದ್ದು, ಮೌಲ್ಯಾಂಕನಕ್ಕೆ ಒಳಪಡಿಸಿವೆ.
9. "ಕ್ವಿಜ್" ಶಿಕ್ಷಕರ ಕಲಿಕೆಯನ್ನು ಓರೆಗೆ ಹಚ್ಚುವಂತಿದ್ದು, ಶಿಕ್ಷಕರು ಅಂಕಗಳನ್ನು ಹೆಚ್ಚು ಗಳಿಸಲು ಪ್ರಯತ್ನ ಪಡುತ್ತಾರೆ.
10. ಮಾಡ್ಯೂಲ್‌ಗಳಲ್ಲಿ ಮುದ್ರಣ ದೋಷಗಳ ಸಂಖ್ಯೆಯು ವಿರಳವಾಗಿದೆ.

## ದೀಕ್ಷಾ ಆಪ್ ಬಳಕೆಯ ಹಾಗು ಬಳಸಿದ ನಂತರದ ಪರಿಮಾಣಾತ್ಮಕತೆ ಕುರಿತು ಅಧ್ಯಯನದಿಂದ ಕಂಡುಕೊಂಡ

## ಋಣಾತ್ಮಕ ಅಂಶಗಳು

1. ದೀಕ್ಷಾ ಆಪನ್ನು ಶಿಕ್ಷಕರು ಪ್ರಾರಂಭ ಹಂತದಲ್ಲಿ ಬಳಕೆ ಮಾಡಿರುವುದು ವಿರಳವಾಗಿದೆ.
2. ಶಿಕ್ಷಕರು 4ಜಿ ಸೆಟ್ಟನ್ನು ಬಳಸಲು ಮೊದಮೊದಲು ಬಳಸಲು ಹಿಂಜರಿಕೆತನ ಮಾಡಿರುವುದು.
3. ಪ್ರತಿ ಕ್ಲಸ್ಟರ್‌ಗಳಲ್ಲಿ ನೇಮಿಸಿರುವ ದೀಕ್ಷಾ ಕ್ರಿಯೇಟರ್ಸ್‌ಗಳು ಶಿಕ್ಷಕರಿಗೆ ಸೂಕ್ತ ಮಾಹಿತಿಗಳನ್ನು ನೀಡಿ, ದೀಕ್ಷಾ ಆಪನ್ನು ಇನ್‌ಸ್ಟಾಲ್ ಮಾಡಿಕೊಡುವಲ್ಲಿ ವಿಳಂಬ ಮಾಡಿರುತ್ತಾರೆ.
4.

## ದೀಕ್ಷಾ ಆಪ್ ಬಳಕೆಯ ಹಾಗು ಬಳಸಿದ ನಂತರದ ಪರಿಮಾಣಾತ್ಮಕತೆ ಕುರಿತು ಅಧ್ಯಯನದಿಂದ ಕಂಡುಕೊಂಡ

## ಶೈಕ್ಷಣಿಕ ನಿಹಿತಾರ್ಥಗಳು

# ಉಪಸಂಹಾರ

ಡಯಟ್, ಚಿತ್ರದುರ್ಗ ವತಿಯಿಂದ 2020–21ನೇ ಸಾಲಿಗೆ ಚಿತ್ರದುರ್ಗ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲಿನ ಸರ್ಕಾರಿ ಕಿರಿಯ ಹಾಗು ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕರಿಗೆ ದೀಕ್ಷಾ ಆಪನ್ನು ಬಳಸಿಕೊಂಡು 12 ಜನರಿಕ್ ಕೋರ್ಸ್‌ಗಳನ್ನು ಪೂರ್ಣಗೊಳಿಸಲು ಇಲಾಖಾಧಿಕಾರಿಗಳು ಕೈಗೊಂಡ ಕ್ರಮಗಳು ಉತ್ತಮವಾಗಿವೆ. ಕರ್ನಾಟಕ ಸರ್ಕಾರವು ಕೋವಿಡ್–19 ರ ಸಂಧಿಗ್ದ ಸಮಯದಲ್ಲಿ ಶಿಕ್ಷಕರು ತಮ್ಮ ಶೈಕ್ಷಣಿಕ ಚಟುವಟಿಕೆಗಳನ್ನು ಮುಂದುವರೆಸಿಕೊಂಡು ಹೋಗಲು "ದೀಕ್ಷಾ ಆಪ್" ಬಳಸಿ ಕೋರ್ಸ್‌ಗಳನ್ನು ಪೂರೈಸಿಕೊಟ್ಟು, ಶಿಕ್ಷಕರ ಬೋಧನಾ ಚಟುವಟಿಕೆಗಳಿಗೆ ಉಪಯುಕ್ತ ವೇದಿಕೆಯಾಗಿದೆ. ಪ್ರಸ್ತುತವಲ್ಲದೇ, ಮುಂದೆಯೂ ಈ ಆಪ್‌ನಿಂದ ಉಪಯುಕ್ತ ಕೋರ್ಸ್‌ಗಳನ್ನು ಶಿಕ್ಷಕರು ಬಳಸಿಕೊಂಡು ತಮ್ಮ ಶೈಕ್ಷಣಿಕ ಚಟುವಟಿಕೆಗಳಿಗೆ ಸಹಾಯಕ ಮಾಡಿಕೊಳ್ಳುವ ಕ್ರಮವಾಗಿದೆ.

ವಿದ್ಯಾರ್ಥಿಗಳಿಗೆ ಸುಲಭವಾಗಿ ಕಲಿಸಿಕೊಡುವ ಕ್ರಮವನ್ನು ನಮ್ಮ ಶಿಕ್ಷಕರು ಕಲಿತುಕೊಂಡರೆ ಉತ್ತಮವಾಗುವುದು ಎಂದು ಭಾವಿಸುತ್ತಾ, ಈ ಅಧ್ಯಯನವನ್ನು ಓದಿ, ಇದರಲ್ಲಿ ಕಂಡುಬರುವ ಲೋಪದೋಷಗಳನ್ನು ಸರಿಪಡಿಸಿಕೊಂಡು, ಸಾಧ್ಯವಾದಲ್ಲಿ ಪ್ರಾಂಶುಪಾಲರು, ಡಯಟ್, ಚಿತ್ರದುರ್ಗ ಇವರಿಗೆ ಪತ್ರದ ಮೂಲಕ ತಿಳಿಸಲು ಕೋರುತ್ತೇನೆ.

ಧನ್ಯವಾದಗಳೊಂದಿಗೆ,

ಜಿ.ಎಸ್.ನಾಗರಾಜ್

ಉಪನ್ಯಾಸಕರು, ಡಯಟ್, ಚಿತ್ರದುರ್ಗ